ಉಪನ್ಯಾಸ
ಗ್ರಂಥಮಾಲೆ

೨೫೩

ಗ್ರಾಮೋದ್ಯೋಗಗಳ ಮಹತ್ವ

ಪಿ. ಎ. ಭಟ್ಟ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ
ನವಂಬರ, ೧೯೭೬

ರಜತಮಹೋತ್ಸವದ ಪ್ರಕಟನೆ

ಉಪನ್ಯಾಸ ಗ್ರಂಥಮಾಲೆ

೨೫೩

ಗ್ರಾಮೋದ್ಯೋಗಗಳ ಮಹತ್ವ

ಪ್ರೊ. ಪಿ. ಎ. ಭಟ್ಟ ಎಂ. ಎ.

ಕರ್ನಾಟಕ ವಿಶ್ವವಿದ್ಯಾಲಯ

ಧಾರವಾಡ

ನವಂಬರ, ೧೯೭೬

ಪ್ರಕಾಶಕರು :

ಸಿ. ಎಸ್. ಕಣವಿ

ನಿರ್ದೇಶಕರು :

ವ್ಯಾಸಂಗವಿಸ್ತರಣ–ಪ್ರಕಟನೆ ವಿಭಾಗ

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಪ್ರಥಮ ಮುದ್ರಣ : ೫೦೦೦ ಪ್ರತಿಗಳು

ನವಂಬರ, ೧೯೭೬

ಬೆಲೆ : ೨೫ ಪೈಸೆ

ಮುದ್ರಕರು :

ಕರ್ನಾಟಕ ವಿಶ್ವವಿದ್ಯಾಲಯ ಮುದ್ರಣಾಲಯ

ಧಾರವಾಡ–೫೮೦ ೦೦೩

ಮುನ್ನುಡಿ

ಕರ್ನಾಟಕ ವಿಶ್ವವಿದ್ಯಾಲಯವು ತನ್ನ ವ್ಯಾಸಂಗ ವಿಸ್ತರಣ ಹಾಗೂ ಪ್ರಕಟನ ಶಾಖೆಯ ಮುಖಾಂತರ ಕೈಕೊಂಡು ನಡೆಸುತ್ತಿರುವ ಜ್ಞಾನಪ್ರಸಾರದ ಯೋಜನೆಗಳಲ್ಲಿ ಈ 'ಉಪನ್ಯಾಸ ಗ್ರಂಥಮಾಲೆ' ಅತ್ಯಂತ ಮುಖ್ಯವೂ, ಜನ ಪ್ರಿಯವೂ ಆಗಿರುವುದು ಹೆಮ್ಮೆಯ ಮಾತಾಗಿದೆ. ವಿಶ್ವ ವಿದ್ಯಾಲಯದ ಆಡಳಿತಕ್ಷೇತ್ರದಲ್ಲಿರುವ ಎಂಟು ಜಿಲ್ಲೆಗಳ ಲ್ಲಿಯೂ ಉಪನ್ಯಾಸ ಶಿಬಿರಗಳನ್ನು ಏರ್ಪಡಿಸಲಾಗುತ್ತಿದ್ದು, ವಿಶ್ವವಿದ್ಯಾಲಯದ ಮತ್ತು ಇದಕ್ಕೆ ಸೇರಿದ ಕಾಲೇಜುಗಳ ಪ್ರಾಧ್ಯಾಪಕರು ಸಾಹಿತ್ಯ, ವಿಜ್ಞಾನ, ಸಾಮಾಜಿಕ ಶಾಸ್ತ್ರ ಮೊದಲಾದ ಶಾಖೆಗಳಿಗೆ ಸಂಬಂಧಪಟ್ಟ ವಿಷಯಗಳನ್ನು ಆಯ್ದುಕೊಂಡು, ಶಾಸ್ತ್ರಸಮ್ಮತವಾದ ಸರಣಿಯಲ್ಲಿ, ಜನ ಸಾಮಾನ್ಯರಿಗೆ ತಿಳಿಯುವ ಶೈಲಿಯಲ್ಲಿ ಈ ಶಿಬಿರಗಳಲ್ಲಿ ಉಪನ್ಯಾಸಗಳನ್ನು ಕೊಡುತ್ತಾರೆ. ವಿಶ್ವವಿದ್ಯಾಲಯದ ಜ್ಞಾನ ಭಾಂಡಾರದ ಅಲ್ಪಾಂಶವನ್ನಾದರೂ ಮಹಾಜನರ ಮನೆ ಬಾಗಿಲಿಗೆ ಒಯ್ದು ಮುಟ್ಟಿಸಬೇಕೆಂದು ಮಾಡಿದ ಈ ಪ್ರಯತ್ನಕ್ಕೆ ನಮ್ಮ ನಿರೀಕ್ಷೆಗೆ ಮೀರಿದ ಮೆಚ್ಚಿಕೆಯೂ, ಪ್ರೋತ್ಸಾಹವೂ ದೊರೆಯುತ್ತಿವೆ. ಜನರು ತಾವಾಗಿಯೇ ಮುಂದೆ ಬಂದು ತಮ್ಮ ತಮ್ಮ ಊರುಗಳಲ್ಲಿ ಈ ಉಪನ್ಯಾಸ ಮಾಲೆಗಳನ್ನು ಏರ್ಪಡಿಸಲು ವಿಶ್ವವಿದ್ಯಾಲಯಕ್ಕೆ ಬರೆದು ಬಿನ್ನವಿಸಿಕೊಳ್ಳುತ್ತಿರುವುದು ನಿಜವಾಗಿಯೂ ಸಂತೋಷದ ಸಂಗತಿಯಾಗಿದೆ.

ಈ ಜ್ಞಾನಪ್ರಸಾರ ಕಾರ್ಯದಲ್ಲಿ ಭಾಗವಹಿಸುವುದರಿಂದ ವಿಶ್ವವಿದ್ಯಾಲಯದ ಹಾಗೂ ಕಾಲೇಜುಗಳ ಅಧ್ಯಾಪಕರಿಗೆ ಆಯಾ ಪ್ರದೇಶದ ಜನತೆಯೊಡನೆ ಹೆಚ್ಚಿನ ಸಂಪರ್ಕ ಒದಗುವುದಲ್ಲದೆ ಎಂತಹ ವಿಷಯವನ್ನಾದರೂ ಕನ್ನಡದಲ್ಲಿ ತಿಳಿಸಿ ಹೇಳುವ ಹಾಗೂ ಅದನ್ನು ಸುಲಭ ಶೈಲಿಯಲ್ಲಿ ಬರೆವಣಿಗೆಯಲ್ಲಿಳಿಸುವ ಅವಕಾಶ ದೊರೆಯುತ್ತದೆ. ಈ ಕಾರ್ಯದಲ್ಲಿ ಅವರೆಲ್ಲರೂ ಮನಮುಟ್ಟಿ ಸಹಕರಿಸುತ್ತಿರುವುದು ಶ್ಲಾಘನೀಯ.

ಈ ಮಾಲೆಯಲ್ಲಿ ಈಗಾಗಲೇ ೨೫೨ ಪುಸ್ತಕಗಳು ಪ್ರಕಟವಾಗಿವೆ. ಅವು ಅಚ್ಚಾಗಿ ಹೊರಬಂದೊಡನೆ ಅವುಗಳ ಸಾವಿರಾರು ಪ್ರತಿಗಳನ್ನು ಜನರು ಕೊಂಡು ಓದುತ್ತಾರೆ. ಅನೇಕ ಪುಸ್ತಕಗಳು ನಾಲ್ಕು-ಐದು ಮುದ್ರಣಗಳನ್ನು ಕಂಡಿರುವುದು ಈ ಮಾಲೆಯ ಉಪಯುಕ್ತತೆಯನ್ನೂ, ಜನಪ್ರಿಯತೆಯನ್ನೂ ವ್ಯಕ್ತಗೊಳಿಸುತ್ತದೆ. ಇದು ನಾಡಿನ ಪ್ರಗತಿಯ ಚಿಹ್ನೆಯೆಂದು ಭಾವಿಸುತ್ತೇನೆ.

ವಿಶ್ವವಿದ್ಯಾಲಯದ ಈ ಸೇವೆಯ ಸಂಪೂರ್ಣ ಪ್ರಯೋಜನ ಪಡೆದು ಸಾಮಾನ್ಯ ಜನತೆ ನಾಡಿನ ಸರ್ವತೋಮುಖ ಪ್ರಗತಿಯಲ್ಲಿ ಪಾಲುಗೊಳ್ಳಲೆಂದು ಹಾರೈಸುತ್ತೇನೆ.

ಕರ್ನಾಟಕ ವಿಶ್ವವಿದ್ಯಾಲಯ
ಧಾರವಾಡ

ಆರ್. ಸಿ. ಹಿರೇಮಠ
ಕುಲಪತಿಗಳು

ಲೇಖಕರ ಮಾತು

ಕರ್ನಾಟಕ ವಿಶ್ವವಿದ್ಯಾಲಯದವರು ಅಗಸ್ಟ, ೧೯೭೫ರ ೨೬ ಮತ್ತು ೨೭ನೇ ತಾರೀಖಿನಂದು ರಾಯಚೂರ ಜಿಲ್ಲೆಯ ಟಲಕಲ್ ಗ್ರಾಮದಲ್ಲಿ(ಯಲಬುರ್ಗಿ ತಾಲ್ಲೂಕ) ಏರ್ಪಡಿಸಿದ 'ಪ್ರಸಂಗವಿಸ್ತರಣ ಉಪನ್ಯಾಸ' ಮಾಲೆಯಲ್ಲಿ ನಾನು 'ಗ್ರಾಮೋದ್ಯೋಗಗಳ ಮಹತ್ವ' ಎಂಬ ವಿಷಯದ ಮೇಲೆ ಮಾತಾಡಿದೆ. ಈ ಕಿರುಹೊತ್ತಿಗೆಯಲ್ಲಿ ಅದನ್ನೇ ಸ್ವಲ್ಪ ವಿಸ್ತೃತವಾಗಿ ಇಡುವ ಪ್ರಯತ್ನವನ್ನು ನಡೆಸಿದ್ದೇನೆ.

ಸಮಾಜವಾದಿ ಸಮಾಜ ಸ್ಥಾಪನೆಯಲ್ಲಿ ಸರಕಾರವು ಹಲವು ರಚನಾತ್ಮಕ ಕಾರ್ಯಗಳನ್ನು ಹಮ್ಮಿಕೊಂಡು ವೇಗ ವಾಗಿ ಆ ಗುರಿ ಸಾಧಿಸಲು ಪ್ರಯತ್ನಿಸುತ್ತಿರುವಾಗ, ಹಳ್ಳಿಗಳ ನಾಡಾದ ಭಾರತದಲ್ಲಿ ಗ್ರಾಮೋದ್ಯೋಗಗಳು ಆರ್ಥಿಕ ಬೆಳ ವಣಿಗೆಯಲ್ಲಿ ಮಹತ್ವದ ಮೈಲುಗಲ್ಲುಗಳಾಗಿವೆ. ಇವನ್ನು ನಿರ್ಲಕ್ಷಿಸಿದ ಯಾವುದೇ ಯೋಜನೆ ಸಫಲವಾಗುವದು ಸಂಶ ಯಾತ್ಮಕವಾಗಿದೆ ಎಂಬುದನ್ನು ಇಲ್ಲಿ ಒತ್ತಿ ಹೇಳಿರುವೆ. ಅದೇ ವೇಳೆಯಲ್ಲಿ ಜನತೆ ಇವುಗಳ ಅಭಿವೃದ್ಧಿಗೆ ಯಾವ ರೀತಿ ಪ್ರಯತ್ನಿಸಬೇಕೆಂಬುದನ್ನು ವಿವರಿಸುವ ಪ್ರಯತ್ನ ನಡೆಸಿರುವೆ.

ಅಂದು ಭಾಷಣಮಾಡುವ ಅವಕಾಶ ಕಲ್ಪಿಸಿಕೊಟ್ಟು ಇಂದು ಪುಸ್ತಕ ರೂಪದಲ್ಲಿಯೂ ಹೊರಬರುವಂತೆ ದಾರಿ ತೋರಿಸಿದ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ನನ್ನ ನಮನ ಗಳು. ಹಸ್ತಪ್ರತಿಯ ರಚನೆಯಲ್ಲಿ ಸಲಹೆ ಸೂಚನೆಗಳನ್ನಲ್ಲದೆ ನನ್ನ ವ್ಯವಸಾಯದಲ್ಲಿ ಗುರುಗಳಾದ ಪ್ರಾಚಾರ್ಯ ಡಾ|| ಎನ್. ಆರ್ ರಾವ್ ಅವರಿಗೆ ನನ್ನ ವಂದನೆಗಳನ್ನು ಸಲ್ಲಿಸುವೆ. ಅದೇ ವೇಳೆಯಲ್ಲಿ ಈ ಹಸ್ತಪ್ರತಿಯನ್ನು ಓದಿ ಪ್ರೋತ್ಸಾಹ ನೀಡಿದ ಗಿಬ್ ಹೈಸ್ಕೂಲ ಶಿಕ್ಷಕ ವಸಂತ ನಿಲಕುಂದರಿಗೆ ಕೃತಜ್ಞತೆಗಳು. ಅದೇ ರೀತಿ ನನ್ನ ಪ್ರತಿ ಯೊಂದು ಕಾರ್ಯದಲ್ಲಿ ಪ್ರೇರಕ ಶಕ್ತಿಯಾಗಿ ನಿಲ್ಲುವ ನನ್ನ ಜೀವನ ಸಂಗಾತಿಯನ್ನು ನಾನು ಇಲ್ಲಿ ಮರೆಯಲಾರೆ.

ಪಿ. ಎ. ಭಟ್ಟ

ಎ. ವ್ಹಿ. ಬಾಳಿಗಾ, ವಾಣಿಜ್ಯ
ಮಹಾವಿದ್ಯಾಲಯ
ಕುಮಟಾ
೩೦-೮-೧೯೭೫

ಪರಿವಿಡಿ

ಮುನ್ನುಡಿ iii

ಲೇಖಕರ ಮಾತು v

ಸಹಾಯಕ ಗ್ರಂಥಗಳು viii

೧. ಇಣುಕು ನೋಟ ೧

೨. ಗ್ರಾಮೋದ್ಯೋಗಗಳು ಮತ್ತು ಆರ್ಥಿಕ ಅಭಿವೃದ್ಧಿ ೬

೩. ಗ್ರಾಮೋದ್ಯೋಗಗಳು ಮತ್ತು ನಿರುದ್ಯೋಗ ನಿವಾರಣೆ ೧೧

೪. ಗ್ರಾಮೋದ್ಯೋಗಗಳು ಮತ್ತು ಬೃಹತ್ ಔದ್ಯೋಗೀಕರಣ ೧೪

೫. ಗ್ರಾಮೋದ್ಯೋಗಗಳು ಮತ್ತು ಉತ್ತರ ಕನ್ನಡ ಜಿಲ್ಲೆ ೨೧

೬. ಮುಗಿಸುವ ಮೊದಲು ೨೯

ಸಹಾಯಕ ಗ್ರಂಥಗಳು

1. Village Planning – Jhavarbhai Patel
2. Economic Thought of
   Mahatma Gandhi
   — Ed. by J. S. Mathur &
   A. S. Mathur
3. Cottage and Small Scale Industries and
   planned Economy
   — R. V. Rao & M. A. Phal
4. Agricultural Problems of India
   — Dr. C. B. Mamoria
5. National Planning Committee
   Rural & Cottage Industries
   — Ed. by K. T. Shah
6. The Social Economy of
   North Kanara District
   — Ed. N. Rajgopal Rao
7. Land Utilization and Agriculture in
   North Kanara District
   — Ed. N. Rajgopal Rao

---

೧. ಇಣುಕು ನೋಟ

'ರಾಷ್ಟ್ರೀಯ ಯೋಜನೆಯ ಮೇಲೆ ನನ್ನ ಕಲ್ಪನೆ ಬಳಕೆಯಲ್ಲಿ ಇರುವವುಗಳಗಿಂತ ಬೇರೆಯಾಗಿದೆ. ಔದ್ಯೋಗಿಕ ಪಥದಲ್ಲಿ ಅದು ಇರಲು ನಾನು ಇಚ್ಛಿಸುವದಿಲ್ಲ. ನಾನು ನಮ್ಮ ಹಳ್ಳಿಗಳನ್ನು ಔದ್ಯೋಗೀಕರಣದ ಬಾಧ್ಯದಿಂದ ತಪ್ಪಿಸಲು ಇಚ್ಛಿಸುವೆನು.'

—ಮಹಾತ್ಮಾಗಾಂಧಿ

ಗ್ರಾಮೀಣ ಪ್ರದೇಶಗಳಲ್ಲಿ ನಾವು ಕಂಬಾರಿಕೆ, ಕುಂಬಾರಿಕೆ, ಬೆತ್ತ ಹೆಣೆಯುವದು, ಬುಟ್ಟಿ ತಯಾರಿಕೆ, ಪಾದರಕ್ಷೆಗಳ ತಯಾರಿಕೆ, ಕೈಮಗ್ಗದಿಂದ ನೂಲುವದು, ಗೊಂಬೆಗಳ ನಿರ್ಮಾಣ ಹಾಗೂ ಹಲವಾರು ಕರಕುಶಲ ಕಲಾತ್ಮಕ ವಸ್ತುಗಳ ತಯಾರಿಕೆ ಇತ್ಯಾದಿ ಹಲವಾರು ಉದ್ಯಮಗಳನ್ನು ಕಾಣುತ್ತೇವೆ. ಹೆಚ್ಚಾಗಿ ಇವುಗಳಲ್ಲಿ ಹಲವು ಜಾತಿ ಪದ್ಧತಿಯ ಮೇಲೆ ಅಥವಾ ಮನೆತನದ ದಂಧೆಯಂತೆ ಬೆಳೆದು ಬಂದಿವೆ. ಇವಲ್ಲದೆ ಹಲವಾರು ಕಿರು ಉದ್ಯಮಗಳನ್ನು ಸಹ ನಾವು ಕಾಣುತ್ತೇವೆ. ಇವೆಲ್ಲವುಗಳನ್ನು ನಾವು ಗ್ರಾಮೀಣ ಉದ್ಯಮಗಳು ಎಂದು ಹೇಳುತ್ತೇವೆ.

ಈ ಉದ್ಯಮಗಳಿಗೆ ದೇಶದ ಆರ್ಥಿಕತೆಯಲ್ಲಿ ವಿಶಿಷ್ಟವಾದ ಸ್ಥಾನವಿದೆ. ಇವುಗಳಿಂದ ದೊರೆಯುವ ಕೆಲವು ಲಾಭಗಳು ಮಾನಸಿಕವಾದರೆ, ಕೆಲವು ಸಾಮಾಜಿಕ, ಇನ್ನು ಕೆಲವು ರಾಜಕೀಯ ಮಹತ್ವದ್ದಾಗಿವೆ. ಇಲ್ಲಿ ಈ ಉದ್ದಿಮೆಗಳ ಲಾಭಗಳ ಒಂದು ಹಕ್ಕಿನೋಟವನ್ನು ಇರಿಸಿ ಮುಂದಿನ ಅಧ್ಯಾಯಗಳಲ್ಲಿ ಮಹತ್ವವಾದವುಗಳನ್ನು ವಿವರಿಸುವ ಪ್ರಯತ್ನ ಮಾಡಲಾಗಿದೆ.

೧. **ತನ್ನದೆಂಬ ಭಾವನೆ:** ತನ್ನ ಮನೆಯಲ್ಲಿ ತನ್ನ ಸ್ವಂತ ಸಲಕರಣೆಗಳಿಂದ ಕೆಲಸ ಮಾಡುವ ಕೆಲಸಗಾರ ತನ್ನ ಸ್ವಂತದ್ದಾದ ಕರ ಕೌಶಲ್ಯವನ್ನು, ಬುದ್ಧಿಯನ್ನು ಉಪಯೋಗಿಸಿ ಒಂದು ವಸ್ತು ಉತ್ಪಾದನೆ ಮಾಡುವಾಗ ಅವನಿಗೆ ಅದರಿಂದ ಸಿಗುವ ಮಾನಸಿಕ ಶಾಂತಿಯನ್ನು ಯಾವುದೇ ಅಳತೆಗೋಲಿನಿಂದ (ಉದಾ- ಲಾಭ) ಅಳೆಯಲು ಸಾಧ್ಯವಿಲ್ಲ.

೨. **ಗುಣಮಟ್ಟ, ವಿನ್ಯಾಸ ಮತ್ತು ಕಲೆಗೆ ಲಕ್ಷ್ಯ:** ಕರ ಕುಶಲ ಕರ್ಮಿಯು ತನ್ನ ಆಯುಧಗಳಿಂದಲೇ ಒಂದು ವಸ್ತುವನ್ನು ಉತ್ಪಾದಿಸುವಾಗ ಅದರಲ್ಲಿ ತನ್ನ ಕೌಶಲ್ಯವನ್ನು ತುಂಬುತ್ತಾನೆ. ಸುಂದರವಾದ ವಿನ್ಯಾಸ ಹೊರಬರುವದನ್ನು ಕಾಣಲು ಬಯಸುತ್ತಾನೆ. ಫ್ಯಾಕ್ಟರಿಯಲ್ಲಿ ಕೆಲಸಮಾಡುವ ಕೆಲಸಗಾರ ತನ್ನ ಕೌಶಲ್ಯ ಪ್ರದರ್ಶಿಸಲಾರ. ಈಗಲೂ ಸಹ ಕಲಾತ್ಮಕ ಸೃಷ್ಟಿಗೆ, ಘನತೆಗೆ ಮತ್ತು ಸೌಂದರ್ಯಕ್ಕೆ ಎಲ್ಲಿ

ಮಹತ್ವವಿದೆಯೋ ಅಲ್ಲಿ ಗುಡಿ ಕೈಗಾರಿಕೆಗೆ ಸ್ಥಾನವಿದೆ. ಆದ್ದರಿಂದಲೇ ಔದ್ಯೋಗೀಕರಣದಲ್ಲಿ ಮುಂದುವರಿದ ರಾಷ್ಟ್ರಗಳಲ್ಲಿ ಸಹ ಇದರ ಸ್ಥಾನ ಕಡಿಮೆಯಾಗಿಲ್ಲ.

೩. **ಪೂರಕ ಪೂರೈಕೆ:** ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಲ್ಲಿ ಕೈಗಾರಿಕೀಕರಣವು ದೊಡ್ಡ ಪ್ರಮಾಣದಲ್ಲಿ ಹಮ್ಮಿಕೊಳ್ಳಲಾಗುತ್ತದೆ. ಬೃಹತ್ ಉದ್ಯಮಗಳ ಬೆಳವಣಿಗೆಗೆ ಹಲವು ಅಡಚಣೆಗಳಿರುತ್ತವೆ. ಅದೇ ವೇಳೆಯಲ್ಲಿ ಅವುಗಳಿಂದ ಬರುವ ಉತ್ಪಾದನೆಗೆ ಬಹಳ ಕಾಲ ಹಿಡಿಯುತ್ತದೆ. ಇಂತಹ ಸಂದರ್ಭದಲ್ಲಿ ಕಿರು ಮತ್ತು ಗೃಹ ಉದ್ಯಮಗಳು ಮಹತ್ವದ ಸ್ಥಾನವನ್ನು ಪಡೆಯುತ್ತವೆ.

೪. **ವ್ಯೂಹ ಮಹತ್ವ:** ಇಂತಹ ಉದ್ದಿಮೆಗಳು ಒಂದೇ ಕಡೆಯಲ್ಲಿ ಕೇಂದ್ರೀಕೃತವಾಗಿರದೇ ಎಲ್ಲಾ ಕಡೆ ಜಾಲವಾಗಿ ಹಬ್ಬಿರುವದು ದೇಶಕ್ಕೆ ಒಂದು ವಿಶಿಷ್ಟ ಲಾಭ. ಬೃಹತ್ ಉದ್ದಿಮೆಗಳ ಘಟಕಗಳು ಒಂದೇ ಕಡೆ ಕೇಂದ್ರೀಕೃತವಾಗಿರುವದರಿಂದ ವಿಮಾನ ದಾಳಿಗಳ ಭಯ ಇರುತ್ತದೆ. ಆದರೆ ಕಿರು ಮತ್ತು ಗೃಹ ಉದ್ದಿಮೆಗಳು ಎಲ್ಲಾ ಕಡೆ ಹಬ್ಬಿರುವದರಿಂದ ಇಂತಹ ಭಯ ಇರುವದಿಲ್ಲ.

೫ **ಪೂರಕ ಉದ್ಯೋಗ ಮತ್ತು ಆದಾಯ:** ಒಕ್ಕಲುತನವೇ ಮುಖ್ಯ ಕಸಬಾದ ನಮ್ಮ ಒಕ್ಕಲಿಗರಿಗೆ ಖಾಲಿದಿನಗಳಲ್ಲಿ ಗೃಹ ಉದ್ದಿಮೆಗಳು ಪೂರಕ ಉದ್ಯೋಗ

ವನ್ನು ಒದಗಿಸಿ ಅವರ ಆದಾಯ ಹೆಚ್ಚಿಸಲು ಸಹಕರಿಸುತ್ತವೆ.

೬. ಭಾರತದ ಆರ್ಥಿಕ ಸ್ಥಿತಿಗೆ ಅತಿಯೋಗ್ಯವಾಗಿವೆ : ಹಳ್ಳಿಗಳು ಬೆನ್ನೆಲುಬಾಗಿ ಒಕ್ಕಲುತನ ಪ್ರಧಾನವಾದ ಭಾರತದ ಆರ್ಥಿಕತೆಗೆ ಇವು ಮಹತ್ವದ ಉದ್ದಿಮೆಗಳಾಗಿವೆ. ಸಬಲ, ಸದೃಢವಾದ ಆರ್ಥಿಕ ನಿರ್ಮಾಣಕ್ಕೆ ಹಳ್ಳಿಗಳ ಪುನರ್ ನಿರ್ಮಾಣವಾಗಬೇಕು. ಈ ನಿಟ್ಟಿನಲ್ಲಿ ಇಂತಹ ಕೈಗಾರಿಕೆಗಳ ಪಾತ್ರ ಮಹತ್ವದ್ದಿದೆ.

೭. ಕೈಗಾರಿಕೀಕರಣದ ಕೆಟ್ಟ ಪರಿಣಾಮಗಳನ್ನು ದೂರಮಾಡಲು : ಬೃಹತ್ ಕೈಗಾರಿಕೀಕರಣವು ಕೆಲವೇ ಸ್ಥಳಗಳಲ್ಲಿ ಅತಿಯಾದ ಜನದಟ್ಟಣೆ, ಕೆಟ್ಟ ವಾತಾವರಣ, ಮಲಿನ ಸ್ಥಳಗಳು, ಸಾಮಾಜಿಕ ಅನ್ಯಾಯ, ಆರ್ಥಿಕ ಅಶಾಂತಿ, ಗುಂಪು ಕಲಹ, ಸಂಪತ್ತಿನ ವಿಷಯ ವಿತರಣೆ ಇತ್ಯಾದಿಗಳಿಗೆ ಕಾರಣವಾಗುತ್ತದೆ. ಈ ಕೆಟ್ಟ ಪರಿಣಾಮಗಳನ್ನು ದೂರ ಮಾಡುವ ಒಂದು ಕ್ರಮ ಕಿರು ಮತ್ತು ಗೃಹ ಉದ್ದಿಮೆಗಳ ಜಾಲವನ್ನು ಬಲಪಡಿಸುವದು.

೮. ಸಾಮಾಜಿಕ ಮಹತ್ವ : ಹಳ್ಳಿಗಳಲ್ಲಿ ನಿರುದ್ಯೋಗ ಮತ್ತು ಅರೆ ಉದ್ಯೋಗ ಇರುವಾಗ ಸಹಜವಾಗಿ ಜನರು ಶಹರಗಳಿಗೆ ವಲಸೆ ಹೋಗುತ್ತಾರೆ. ಶಹರಗಳಲ್ಲಿ ಅಂತಹ ಜನರಿಗೆ ಉದ್ಯೋಗ ನೀಡುವ ಸಾಮರ್ಥ್ಯ ಇಲ್ಲದಿರು

ವಾಗ ಅಂತಹವರು ಕಳುವು, ಸುಲಿಗೆ, ದರೋಡೆ, ಹಾಗೂ ಮೋಸಗಾರಿಕೆಯಲ್ಲಿ ತೊಡಗುತ್ತಾರೆ. ಇದು ಕಹಂದ ಆಡಳಿತ ನಿರ್ವಹಣೆಯಲ್ಲಿ ದೊಡ್ಡ ತೊಡಕಾಗುವದು. ಒಮ್ಮೆ ಉದ್ಯೋಗ ದೊರಕಿದರೂ ಸಹ ವಸತಿ, ವಾಹನ ಮತ್ತು ಇತರ ಸಮಸ್ಯೆಗಳು ಉದ್ಭವಿಸುತ್ತವೆ. ಆದರೆ ಗ್ರಾಮೋದ್ಯೋಗಗಳು ಇಂತಹ ಜನತೆಗೆ ಊರಲ್ಲಿಯೇ ಅದೂ ತಮ್ಮ ಮನೆಯಲ್ಲಿಯೇ ನೌಕರಿ ದೊರಕಿಸಿ ಕೊಡುವದರಿಂದ ಇಂತಹ ಸಮಸ್ಯೆಗಳು ಉಂಟಾಗುವುದಿಲ್ಲ.

೯. **ರಾಜಕೀಯ ಮಹತ್ವ :** ರಾಜಕೀಯ ಸ್ಥಿಮಿತತ್ವ ದೇಶದಲ್ಲಿ ಇರಬೇಕಾದರೆ ದೇಶದ ಜನತೆ ಸಂತೃಪ್ತವಾಗಿರಬೇಕು. ಆದಾಯದ ವಿಷಮತೆ ಕಡಿಮೆಯಾಗಬೇಕು. ಪ್ರತಿಯೋರ್ವನಿಗೆ ತನಗೆ ಬೇಕಾಗುವಷ್ಟು ಅನ್ನ, ಬಟ್ಟೆ ಮತ್ತು ವಸತಿಯನ್ನು ಪಡೆಯುವ ಸಾಮರ್ಥ್ಯಬೇಕು. ಇವಕ್ಕೆ ಒಂದು ಪರಿಹಾರವೆಂದರೆ 'ಸ್ವಉದ್ಯೋಗ' ಪ್ರೋತ್ಸಾಹಿಸುವದು. ಸ್ವಉದ್ಯೋಗದಲ್ಲಿ ಗ್ರಾಮೋದ್ಯೋಗ ಹಳ್ಳಿಗಳ ಮಟ್ಟಿಗೆ ಕೇಂದ್ರ ಬಿಂದುವಾಗಿದೆ. ಮೇಲಾಗಿ ಕೈಗಾರಿಕೆಗಳ ವಿಕೇಂದ್ರಿಕರಣ ಸಹ ರಾಜಕೀಯ ಸ್ಥಿಮಿತತ್ವ ದೃಷ್ಟಿಯಿಂದ ಉತ್ತಮ. ಇದನ್ನು ನಾವು ಈ ಕೈಗಾರಿಕೆಗಳಿಂದಲೇ ಗಳಿಸಲು ಸಾಧ್ಯವಾಗುವುದು.

೨. ಗ್ರಾಮೋದ್ಯೋಗಗಳು ಮತ್ತು ಆರ್ಥಿಕ ಅಭಿವೃದ್ಧಿ

'ಭಾರತವು ಔದ್ಯಮೀಕರಣ ದಾರಿಯಲ್ಲಿ ಹೆಜ್ಜೆ ಇಟ್ಟಿದೆ. ಮತ್ತು ನನಗೆ ಅದು ಪ್ರಗತಿಶೀಲವಾಗಿ ಔದ್ಯೋಗಿಕ ದೇಶ ಆಗುವಲ್ಲಿ ಸ್ವಲ್ಪವೂ ಸಂಶಯವಿಲ್ಲ. ಆದರೆ ಈ ಪ್ರವೃತ್ತಿ ಭಾರತದ ಕೈಮಗ್ಗಗಳಿಗೆ ಕೊನೆ ತರಲಾರದೆಂದು ನಾನು ಆಶಿಸುತ್ತೇನೆ.'

—**ಜವಾಹರಲಾಲ ನೆಹರು**

ಅಭಿವೃದ್ಧಿ ಪಥದಲ್ಲಿ ಇರುವ ಹಲವು ರಾಷ್ಟ್ರಗಳ ಮುಖ್ಯ ಲಕ್ಷಣವೆಂದರೆ ಆರ್ಥಿಕವಾಗಿ ಹಿಂದುಳಿದಿರುವಿಕೆ. ಈ ದೇಶಗಳಲ್ಲಿ ನಿರುದ್ಯೋಗ ಮತ್ತು ಅರೆ ಉದ್ಯೋಗಗಳು ದೇಶದ ಆರ್ಥಿಕತೆಯನ್ನು ಬಾಧಿಸುವ ಹಲವು ಆರ್ಥಿಕ ರೋಗಗಳಲ್ಲಿ ಮಹತ್ವದ್ದಾಗಿವೆ. ತ್ವರಿತ ಗತಿಯ ಜನಸಂಖ್ಯೆ ಹೆಚ್ಚಳವು ಭೂಮಿಯ ಮೇಲೆ ಹೆಚ್ಚಿನ ಭಾರ ಹಾಕಿದೆ. ಮೇಲಾಗಿ ಹಳೆಯ ಉತ್ಪಾದನಾ ಪದ್ಧತಿ, ಕೆಟ್ಟ ಭೂ ಸ್ವಾಮ್ಯ ನೀತಿ, ಸಾಂಪ್ರದಾಯಿಕ ಹಾಗೂ ಹಳೆಯ ವಿಚಾರಗಳು ಇತ್ಯಾದಿಗಳು ಇನ್ನಿತರ ಹಲವು ಸಮಸ್ಯೆಗಳಾಗಿವೆ. ಏರುತ್ತಿರುವ ಜನಸಂಖ್ಯೆಗೆ ಉದ್ಯೋಗದ ಪ್ರಮಾಣ ಅದೇ ಗತಿಯಲ್ಲಿ ಏರಿಲ್ಲ. ಒಮ್ಮೆ ಕೂಲಿ ಮತ್ತು ಉದ್ಯೋಗಾವಕಾಶಗಳ ನಡುವೆ ಸಮತೂಕವನ್ನು ಸಾಧಿಸದಿದ್ದರೆ ಸಂಪೂರ್ಣ ಜನತೆಯ

ಜೀವನ ಮಟ್ಟ ಕೆಳಗಿಳಿಯುವದು ಖಂಡಿತ. ಗ್ರಾಮೀಣ ಪ್ರದೇಶಗಳಲ್ಲಿ ಕಂಡಾಬರುವ ಒಂದು ರೀತಿಯ ನಿರುದ್ಯೋಗ ವೆಂದರೆ ಅಲ್ಲಿಯ ಜನರು ವರ್ಷದ ಕೇವು ಕಾಲದಲ್ಲಿ ನಿರುದ್ಯೋಗಿಗಳಾಗಿರುತ್ತಾರೆ. ಯಾವುದೇ ರೀತಿಯ ನಿರುದ್ಯೋಗವಿರಲಿ ಅಂತಹ ನಿರುದ್ಯೋಗ ದೇಶದ ಅಭಿವೃದ್ಧಿಯ ದೃಷ್ಟಿಯಿಂದ ಹಾನಿಕರವಿರುತ್ತದೆ.

ಬಡತನ ಮತ್ತು ನಿರುದ್ಯೋಗ ಮತ್ತು ಅರೆಉದ್ಯೋಗಗಳ ಸಮಸ್ಯೆ ಬಿಡಿಸಲು ಬೃಹದಾಕಾರದ ಕೈಗಾರಿಕೆಗಳನ್ನು ಕೆಲವರು ಸೂಚಿಸುತ್ತಾರೆ. ಆದರೆ ಬಂಡವಾಳದ ಕೊರತೆ ಇರುವ ನಮ್ಮ ರಾಷ್ಟ್ರಕ್ಕೆ ಸಂಪೂರ್ಣವಾಗಿ ಇದನ್ನೇ ಅವಲಂಬಿಸಿರುವದು ಸಾಧ್ಯವಿಲ್ಲ. ಕೈಗಾರಿಕೀಕರಣವು ಯೋಗ್ಯವಾಗಿ ಸುಸೂತ್ರವಾಗಿ ನಡೆಯಬೇಕಾದರೆ ಗ್ರಾಮೀಣ ಪ್ರದೇಶದಲ್ಲಿಯ ಒಕ್ಕಲುತನದಲ್ಲಿ ಶೀಘ್ರ ಅಭಿವೃದ್ಧಿಯು ಅವಶ್ಯ.

ಇನ್ನು ಕೆಲವರು ಸಮಸ್ಯೆಯ ಭೀಕರತೆಯನ್ನು ಬಿಡಿಸಲು ವಲಸೆ ಹೋಗುವದು, ಹೊಸ ಭೂ ಪ್ರದೇಶವನ್ನು ಒಕ್ಕಲುತನದಲ್ಲಿ ತರುವದು ಇತ್ಯಾದಿ ಸೂಚಿಸುತ್ತಾರೆ. ಆದರೆ ಈ ಕ್ರಮಗಳು ಉಪಕಾರಿಯಾಗಿಲ್ಲ. ಒಂದನೇಯದಾಗಿ, ಇತ್ತಿತ್ತಲಾಗಿ ಯಾವುದೇ ದೇಶ ಬೇರೆ ದೇಶದ ಜನರನ್ನು ತನ್ನ ದೇಶದಲ್ಲಿ ಬಹಳ ಕಾಲ ಇಡಲು ಬಿಡುವುದಿಲ್ಲ. ಮೇಲಾಗಿ ಹೊಸ ಭೂ ಪ್ರದೇಶಗಳನ್ನು ಒಕ್ಕಲುತನಕ್ಕೆ

ತರುವುದೂ ಸಹ ಪರಿಮಿತವಾದುದು, ಆದ್ದರಿಂದ ಇವುಗಳು ಅಷ್ಟೊಂದು ಸಮಂಜಸ ಎಂದು ತೋರುವುದಿಲ್ಲ.

ಇಂತಹ ಸಂದರ್ಭಗಳಲ್ಲಿ ನಮಗಿರುವ ಮಾರ್ಗ ಎರಡು ೧) ಜನಸಂಖ್ಯೆಯ ಹತೋಟಿ ೨) ಇದ್ದ ಜನಸಂಖ್ಯೆಗೆ ಮೇಲ್ಮಟ್ಟದ ಜೀವನ ಮಟ್ಟವನ್ನು ಒದಗಿಸಿಕೊಡುವ ಕಾರ್ಯ ಕ್ರಮವನ್ನು ಅನುಸರಿಸುವದು. ಇಂತವುಗಳಲ್ಲಿ ಒಂದೆಂದರೆ ಅಸ್ತಿತ್ವದಲ್ಲಿ ಇರುವ ಕಿರು ಮತ್ತು ಗೃಹ ಉದ್ದಿಮೆಗಳನ್ನು ವಿಸ್ತರಿಸುವದು, ನವೀಕರಿಸುವದು ಹಾಗೂ ಅಂತಹ ಕೆಲವು ಹೊಸ ಉದ್ದಿಮೆಗಳನ್ನು ಪ್ರೋತ್ಸಾಹಿಸುವದು.

ರಾಷ್ಟ್ರೀಯ ಅಭಿವೃದ್ಧಿಯ ನೀತಿ ರೂಪಿಸುವಾಗ ನಮ್ಮ ಕಣ್ಣುಮುಂದೆ ಬರುವ ಮನುಷ್ಯನೆಂದರೆ ಸಾಮಾನ್ಯ ಮನುಷ್ಯ. ಅವನ ಸ್ಥಿತಿ ಸುಧಾರಣೆ ದೇಶದ ಸುಧಾರಣೆ. ಅವನ ಆರ್ಥಿಕ ಸ್ಥಿತಿಯ ಸುಧಾರಣೆ ಪರೋಕ್ಷವಾಗಿ ಸಾಮಾಜಿಕ ಬದಲಾವಣೆಯನ್ನು ತರಲು ಕೂಡ ಸಹಕರಿಸುತ್ತಾನೆ. ಭಾರತದಲ್ಲಿನ ಕೃಷಿ ಸಮಾಜ ಎರಡು ರೀತಿಯ ಸಮಸ್ಯೆಗಳನ್ನು ಅನುಭವಿಸುತ್ತದೆ. ೧) ಏರುವ ಜನಸಂಖ್ಯೆಯ ಭಾರ ಭೂ ಪ್ರದೇಶದ ಮೇಲೆ ಬೀಳುತ್ತದೆ. ೨) ಪೂರಕ ಉದ್ದಿಮೆಗಳ ಹಾನಿಯಿಂದ ಹೆಚ್ಚಾದ ಅರೆ ಉದ್ಯೋಗ ಇಂಥ ಸಂದರ್ಭಗಳಲ್ಲಿ ನಾವು ಕೈಗಾರಿಕೀಕರಣ ಅಥವಾ ಯಾಂತ್ರಿಕ ಕರಣಕ್ಕೆ ಅತಿ ಹೆಚ್ಚಿಗೆ ಮಹತ್ವ ಕೊಡದೇ ಇದ್ದ ಉದ್ದಿಮೆಗಳ ನವೀಕರಣ ಮತ್ತು ಪುನರ್ವ್ಯವಸ್ಥೆಗೆ ಹೆಣಗಬೇಕು.

ಅಂದಾಗ ಅಷ್ಟರಮಟ್ಟಿಗೆ ನಿರುದ್ಯೋಗದ ಗಂಭೀರತೆಯನ್ನು ಅಲ್ಪವಾಗಿಯಾದರೂ ಬಿಡಿಸಬಹುದು. ಅದೇ ವೇಳೆಯಲ್ಲಿ ಹೊಸ ಕಿರು ಉದ್ದಿಮೆಗಳಿಗೆ ಪ್ರೋತ್ಸಾಹ ಗ್ರಾಮೀಣ ಮತ್ತು ಸಣ್ಣ ಶಹರಗಳಲ್ಲಿ ಕೊಡಬೇಕು.

ಹಿಂದೆಯೇ ಗಮನಿಸಿದಂತೆ ನಮ್ಮ ಮುಖ್ಯ ಸಮಸ್ಯೆ ಎಂದರೆ ನಿರುದ್ಯೋಗ. ಇದು ಸಹ ದಿನೇ ದಿನೇ ಏರುತ್ತಲಿದೆ. ಆದರೆ ಪಾಶ್ಚಿಮಾತ್ಯ ದೇಶಗಳ ಅನುಭವವನ್ನು ಅವಲೋಕಿಸಿದರೆ ನಾವು ನಮ್ಮ ಸಮಸ್ಯೆಗಳನ್ನು ಕೇವಲ ಬೃಹತ್ ಉದ್ದಿಮೆಗಳಿಂದ ಬಿಡಿಸಲು ಸಾಧ್ಯವಾಗುವದೆಂಬುದಕ್ಕೆ ಆಧಾರವಿಲ್ಲ. ಮೇಲಾಗಿ ಎಲ್ಲ ದೇಶಗಳಲ್ಲಿ ಪಸರಿಸಿರುವ ಬೃಹತ್ ಕೈಗಾರಿಕೀಕರಣದ ಒಂದು ಪರಿಣಾಮವೆಂದರೆ, ಒಮ್ಮೆ ಕೇವಲ ಕೆಲವೇ ದೇಶಗಳ ಸೊತ್ತಾದ ಮಶಿನರಿ ಈಗ ಹಾಗಿಲ್ಲವಾಗಿದೆ. ಆದ್ದರಿಂದ ಬೇರೆ ದೇಶಗಳಿಂದ ಕಚ್ಚಾ ಸಾಮಗ್ರಿ ಪಡೆದು ಉದ್ದಿಮೆಗಳನ್ನು ಸ್ಥಾಪಿಸಿ ಉದ್ಯೋಗ ದೊರಕಿಸಿ ಕೊಡುವದು ಇನ್ನು ಮುಂದೆ ಸಾಧ್ಯವಿಲ್ಲ. ನಮ್ಮ ಸಂಪನ್ಮೂಲಗಳ ಮೇಲೆ ಆಧಾರಿತ ಉದ್ದಿಮೆ ನಮ್ಮ ಧ್ಯೇಯವಾಗಬೇಕು. ಅದೇ ರೀತಿ ಸಮತೂಕದ ಅಭಿವೃದ್ಧಿ, ಸಮವಾದ ಸಂಪತ್ತಿನ ವಿತರಣೆ ಗಳಿಸುವ ಇನ್ನೊಂದು ಮಾರ್ಗ ಎಂದರೆ ಗೃಹ ಉದ್ದಿಮೆಗಳು. ಇಲ್ಲಿ ಮಹಾತ್ಮಾ ಗಾಂಧಿಯವರ ಒಂದು ಮಾತು ಸಮಯೋಚಿತವಾಗಿದೆ. 'ನನ್ನ ಆಕ್ಷೇಪಣೆ ಮಶಿನರಿ ವಿರುದ್ಧವಲ್ಲ ಆದರೆ ಇದಕ್ಕಾಗಿ ಇರುವ ಹುಚ್ಚುತನದ ವಿರುದ್ಧ. ನಾನು ವೇಳೆ ಮತ್ತು ಶ್ರಮವನ್ನು ಮಿತ

ವ್ಯಯ ಮಾಡುವದಕ್ಕೆ ಇಚ್ಛಿಸುತ್ತೇನೆ. ಆದರೆ ಒಂದು ವಿಶಿಷ್ಟ ಪಂಗಡಕ್ಕಲ್ಲ; ಸಂಪೂರ್ಣ ಮಾನವತೆಗೆ.' ಅವರ ಪ್ರಕಾರ 'ಯಾವದೇಶದಲ್ಲಿ ನೌಕರಿ ಕೊಡುವದಕ್ಕಿಂತ ಹೆಚ್ಚು ಜನ ಇರುವರೋ, ಯಂತ್ರೋಪಕರಣಗಳ ಉಪಯೋಗ ಕೆಟ್ಟದ್ದು. ಮಶಿನ್ ಶ್ರಮವನ್ನು ಉಳಿಸುತ್ತದೆ. ಆದರೆ ಇದರಿಂದ ಲಕ್ಷಗಟ್ಟಲೆ ಜನ ಉದ್ಯೋಗದಿಂದ ಹೊರಹಾಕಲ್ಪಡುವರು. ಮತ್ತು ಉಪವಾಸದಿಂದ ರಸ್ತೆಯ ಮೇಲೆ ತಿರುಗುವಂತಾಗುವದು' ಒಂದು ಮಾತಿನಲ್ಲಿ ಹೇಳುವದಾದರೆ ಗೃಹ ಉದ್ದಿಮೆಗಳ ಬೆಳವಣಿಗೆ ಇಂತಹ ಸ್ಥಿತಿಯಲ್ಲಿ ಆವಶ್ಯವಾಗಿದೆ.

ಗೃಹ ಉದ್ದಿಮೆಗಳು ಕೆಲಸಗಾರರಿಗೆ ಅವರ ಮನೆಯಲ್ಲೇ ಕೆಲಸ ದೊರಕಿಸಿಕೊಡುತ್ತವೆ. ಇವು ಒಂದು ಕಡೆ ಕೇಂದ್ರೀಕರಣವಾಗಿರದೇ ದೇಶದ ಮೂಲೆ ಮೂಲೆಗೆ ಪಸರಿಸಿರುವದು ಇನ್ನೊಂದು ಮುಖ್ಯ ಗುಣ. ಅವಕ್ಕೂ ಮೇಲಾಗಿ ನಶಿಸಿ ಹೋಗುತ್ತಿರುವ ಕೆಲವು ಕುಶಲ ಕರ್ಮಗಳನ್ನು ನೋಡಿದರೆ ಇವುಗಳ ಬೆಳವಣಿಗೆಯಲ್ಲಿ ರಾಷ್ಟ್ರದ ಸಾಮಾಜಿಕ ಪ್ರತಿಷ್ಟೆ ಸಹ ಅಡಗಿರುತ್ತದೆ.

ಇದೆಲ್ಲವನ್ನು ಗಮನಿಸಿದರೆ ಗೃಹ ಉದ್ದಿಮೆಗಳ ಪುನರುಜ್ಜೀವನವು ರಾಷ್ಟ್ರೀಯ ಅಭಿವೃದ್ಧಿಯಲ್ಲಿ ಮಹತ್ವದ ಸ್ಥಾನ ಪಡೆದಿದೆ, ಎಂಬುದು ವ್ಯಕ್ತವಾಗುತ್ತದೆ.

೩. ಗ್ರಾಮೋದ್ಯೋಗಗಳು ಮತ್ತು ನಿರುದ್ಯೋಗ ನಿವಾರಣೆ

'ನಿರುದ್ಯೋಗ ಸಮಸ್ಯೆ ಗಾಬರಿಪಡಿಸುವ ಪ್ರಮಾಣ ದಲ್ಲಿ ಹೆಚ್ಚುತ್ತಿರುವ ಈ ದಿನಗಳಲ್ಲಿ ದೇಶಕ್ಕೆ ಅತಿ ಲಾಭ ದಾಯಕವಾದುದೆಂದರೆ ಉದ್ಯೋಗದ ಭರವಸೆ ಕೊಡುವ ಮಾರ್ಗ. ಈ ನಂಬಿಕೆಯು ನಿಮ್ಮ ಕೊನೆಯ ಆಧಾರ ಮತ್ತು ನೀವು ಬಾಪೂರವರ ಪವಿತ್ರ ನೆನಪಿನಿಂದ ಪ್ರೋತ್ಸಾಹ ಪಡೆಯಲು ಪ್ರಯತ್ನಿಸಬೇಕು.'

—ಬಾಬುರಾಜೇಂದ್ರ ಪ್ರಸಾದ

ಅಭಿವೃದ್ಧಿ ಪಥದಲ್ಲಿ ಇರುವ ರಾಷ್ಟ್ರಗಳನ್ನು ಬಾಧಿಸುವ ಮಹತ್ವದ ಕಾಯಿಲೆಗಳಲ್ಲಿ ಒಂದೆಂದರೆ ನಿರುದ್ಯೋಗ ಮತ್ತು ಅರೆ ಉದ್ಯೋಗ. ಭಾರತದ ನಿರುದ್ಯೋಗ ಮತ್ತು ಅರೆ ಉದ್ಯೋಗದ ಕೆಲವು ಮಹತ್ವ ಅಂಕೆ ಅಂಶಗಳು ಈ ಕೆಳಗಿನಂತಿವೆ.

೧. ೧೯೭೦ ರಲ್ಲಿ ಉದ್ಯೋಗ ವಿನಿಮಯ ಕಛೇರಿ ಗಳಿಂದ ಕೆಲಸ ಹುಡುಕುತ್ತಿದ್ದವರ ಸಂಖ್ಯೆ ೩.೬ ಲಕ್ಷ.

೨. ೧೯೭೧ ರಲ್ಲಿ ಆ ಸಂಖ್ಯೆ ೪೪.೯೪ ಲಕ್ಷ– ೨೪% ಹೆಚ್ಚಾಯಿತು.

೩. ಇದು ಕೇವಲ ಶಹರ ನಿರುದ್ಯೋಗವನ್ನು ತೋರಿಸುತ್ತದೆ. ಮತ್ತು ಎಲ್ಲ ನಿರುದ್ಯೋಗಿಗಳು ವಿನಿಮಯ ಕಛೇರಿಯಲ್ಲಿ ನೊಂದಾಣಿಕೆ ಮಾಡದಿದ್ದುದು ಇನ್ನೊಂದು ವಿಷಯ.

೪. ೧೯೭೧ ರ ಸೆನ್ಸಸ್ ಪ್ರಕಾರ ಕೆಲಸಗಾರರ ಸಂಖ್ಯೆ ಪ್ರತಿಶತ ಒಟ್ಟು ಜನಸಂಖ್ಯೆಗೆ ೪೨.೯೮ (೧೯೬೧) ರಿಂದ ೩೩.೫೪%ಕ್ಕೆ ಇಳಿಯಿತು.

೫. ಕೃಷಿ ಕೂಲಿಗಳ ಸಂಖ್ಯೆ ೩೧.೫ ಮಿಲಿಯನ್ ೧೯೬೧ ರಲ್ಲಿ ಇದ್ದರೆ ಅದು ೧೯೭೧ ರಲ್ಲಿ ೪೭.೩ ಮಿಲಿಯನ್‌ಕ್ಕೆ ಏರಿತು.

೬. ಒಂದು ಅಂದಾಜಿನ ಪ್ರಕಾರ ೧೯೭೧ ರಲ್ಲಿ ಲಾಭದಾಯಕ ಉದ್ಯೋಗ ಹುಡುಕುವವರ ಸಂಖ್ಯೆ ೨೩೮ ಮಿ. ಇತ್ತು. ಅದು ೧೯೬೧ ರಲ್ಲಿ ೧೯೦ ಮಿ. ಇತ್ತು. ೧೯೮೧ ರಲ್ಲಿ ಆ ಸಂಖ್ಯೆ ೩೦೦ ಮಿ. ಮುಟ್ಟುವುದು.

೭. ದೇಶದಲ್ಲಿಯ ನಿರುದ್ಯೋಗದ ಸಂಖ್ಯೆ ೧ ಕೋಟಿಯಿಂದ ೧.೩ ಕೋಟಿಯ ವರೆಗೆ ಇದ್ದು ಅರೆ ಉದ್ಯೋಗಿಗಳ ಸಂಖ್ಯೆ ೧.೬ ಕೋಟಿ ಇರುವದೆಂದು ಅಂದಾಜಿಸಲಾಗಿದೆ.

೮. ಪ್ರಾಧ್ಯಾಪಕ ದಾಂಡೇಕರರ ಅಂದಾಜಿನ ಪ್ರಕಾರ ಗ್ರಾಮೀಣ ಜನತೆಯ ೪೦% ಅರೆ ಉದ್ಯೋಗದಲ್ಲಿ ಇರು

ವರು. ರಾಷ್ಟ್ರೀಯ ಸ್ಯಾಂಪಲ್ ಸಮೀಕ್ಷೆಯ ಆಧಾರದ ಮೇಲೆ ಹೇಳುವದಾದರೆ ೧೯೫೨-೫೩ ರಲ್ಲಿ ಪ್ರತಿ ಕೆಲಸಮಾಡುವ ಮನುಷ್ಯನಿಗೆ ೧೪.೯ ದಿನಗಳು ನಿರುಪಯೋಗ ಆಗುತ್ತಿದ್ದರೆ ೧೯೬೦-೬೧ ರಲ್ಲಿ ಅದು ೧೦೩.೮ ಆಯಿತು.

ಗ್ರಾಮೀಣ ಪ್ರದೇಶದ ನಿರುದ್ಯೋಗಕ್ಕೆ ಮತ್ತು ಅರೆ ಉದ್ಯೋಗಕ್ಕೆ ಜನಸಂಖ್ಯೆ ಸ್ಫೋಟ, ಸಹಾಯಕರ ಉದ್ಯೋಗಗಳು ಸಿಗದಿರುವದು, ಉದ್ಯೋಗ ದೃಷ್ಟಿಯಿಂದ ಕೃಷಿಯೇತರ ವಿಭಾಗ ಅನಭಿವೃದ್ಧಿ, ಚಿಕ್ಕ ಭೂಹಿಡುವಳಿಯ ಕಾರಣದಿಂದ ಕೃಷಿಕರು ಮತ್ತು ಭೂರಹಿತ ಕೃಷಿಕರು ಕೇವಲ ಕೆಲವು ವೇಳೆಯಲ್ಲಿ ಮಾತ್ರ ಕೆಲಸದಲ್ಲಿ ಇರುವದು ಹಾಗೂ ಅಷ್ಟೇ ಮಹತ್ವದ್ದೆಂದರೆ ಗುಡಿ ಕೈಗಾರಿಕೆಗಳ ಅವನತಿ.

ಈ ತನಕ ಒಕ್ಕಲುತನವು ದೃತಿಗೆಟ್ಟ ಉದ್ಯಮವಾಗಿದೆ. ಪ್ರಚಲಿತ ಸ್ಥಿತಿಯಲ್ಲಿ ಗ್ರಾಮೀಣ ಪ್ರದೇಶದಲ್ಲಿ ಇರುವ ಅರೆ ಉದ್ಯೋಗದ ಜನತೆಗೆ ಇಲ್ಲಿ ಪೂರ್ಣ ಉದ್ಯೋಗ ದೊರಕಿಸುವದು ಸಾಧ್ಯದ ಮಾತಲ್ಲ. ಇದಕ್ಕೆ ಒಂದು ಪರಿಹಾರವೆಂದರೆ ಸಮಗ್ರ ರಾಷ್ಟ್ರೀಯ ಆರ್ಥಿಕ ಬೆಳವಣಿಗೆಯಲ್ಲಿ ಗ್ರಾಮೀಣ ಉದ್ಯಮಗಳನ್ನು ಉತ್ತೇಜಿಸುವದು, ನವೀಕರಿಸುವದು, ಮತ್ತು ಹೊಸ ಉದ್ದಿಮೆಗಳ ಸ್ಥಾಪನೆಯನ್ನು ಪ್ರೇರೇಪಿಸುವದು.

೪. ಗ್ರಾಮೋದ್ಯೋಗಗಳು ಮತ್ತು ಬೃಹತ್ ಔದ್ಯೋಗೀಕರಣ

'ಯಂತ್ರಗಳು ಆಧುನಿಕ ನಾಗರಿಕತೆಯ ಪ್ರಧಾನ ಗುರುತಾಗಿವೆ, ಇದು ದೊಡ್ಡ ಪಾಪವನ್ನು ಪ್ರತಿನಿಧಿಸುತ್ತದೆ ……… ಮಶಿನರಿ ಎಂದರೆ ಒಂದರಿಂದ ನೂರರ ವರೆಗೆ ತುಂಬಿಕೊಂಡಿರುವ ಸರ್ಪದ ಹುತ್ತದಂತಿದೆ. . . . . . ಅಂದರೆ ಅನಿಷ್ಟಗಳನ್ನು ಪ್ರದರ್ಶಿಸಲು ಪುಸ್ತಕಗಳನ್ನೇ ಬರೆಯ ಬಹುದಾಗಿದೆ.'

— **ಮಹಾತ್ಮಾ ಗಾಂಧಿ**

೧೯ನೇ ಶತಮಾನದಲ್ಲಿ ಬೃಹತ್ ಉದ್ಯಮಗಳು ಮುಂಬ ತೋರಿಸಿದಾಗ ಇವುಗಳ ಸಂಗಡವೇ ಹಲವಾರು ಸಮಸ್ಯೆಗಳು ಕಂಡುಬಂದವು ಅವುಗಳಲ್ಲಿ ನಿರುದ್ಯೋಗ, ಶ್ರಮ ಶೋಷಣೆ ಮತ್ತು ಸಂಪತ್ತಿನ ಕೇಂದ್ರೀಕರಣ ಪ್ರಮುಖವಾಗಿವಿ. ಇಲ್ಲಿ ಮಹಾತ್ಮಾ ಗಾಂಧೀಯವರ ಒಂದು ಮಾತು ಸಮಯೋಜಿತ ವಾಗಿದೆ. 'ಯಂತ್ರಗಳು ಆಧುನಿಕ ನಾಗರಿಕತೆಯ ಪ್ರಧಾನ ಗುರುತಾಗಿವೆ, ಇದು ದೊಡ್ಡ ಪಾಪವನ್ನು ಪ್ರತಿನಿಧಿಸುತ್ತದೆ ……… ಮಶಿನರಿ ಎಂದರೆ ಒಂದರಿಂದ ನೂರರವರೆಗೆ ತುಂಬಿಕೊಂಡಿರುವ ಸರ್ಪದ ಬಿಲದಂತಿದೆ……… ಅದರ ಕೆಡಕುಗಳನ್ನು ಪ್ರದರ್ಶಿಸಲು ಪುಸ್ತಕಗಳನ್ನು ಬರೆಯ ಬಹುದಾಗಿದೆ. ಅಂದಮಾತ್ರಕ್ಕೆ ಅವರು ಮಶಿನರಿಗೆ

ಸಂಪೂರ್ಣ ವಿರೋಧಿಸಿದ್ದರೆಂದಲ್ಲ. 'ನಾನು ಮಶಿನರಿಗೆ ಸಂಪೂರ್ಣ ವಿರೋಧಿಯಲ್ಲ. ಆದರೆ ಅದು ನಮ್ಮನ್ನು ಅಧೀನಪಡಿಸಿಕೊಂಡಾಗ ನಾನು ಅದನ್ನು ವಿರೋಧಿಸುವೆ', ಅವರೇ ಹೇಳಿದ ಇನ್ನೊಂದು ಮಾತಿನಿಂದ ಅವರ ನೀತಿಯು ಯಾವುದಿತ್ತು ಎಂಬುದನ್ನು ಅರಿಯಬಹುದಾಗಿದೆ. 'ನಾನು ಎಲ್ಲ ಮಶಿನರಿಗಳ ನಾಶದ ಗುರಿ ಇಡುವುದಿಲ್ಲ. ಅದರ ಮಿತಿ ಮಾತ್ರ' ಈ ಎಲ್ಲ ಅಭಿಪ್ರಾಯಗಳ ಸಾರವೆಂದರೆ ಅತಿಯಾಗಿ ಮಶಿನರಿ ಮೇಲೆ ಅವಲಂಬಿಸಿದಂಥ ಬೃಹತ್ ಉದ್ಯಮೀಕರಣ ಒಳಿತಲ್ಲ. ಕಿರು ಮತ್ತು ಗೃಹ ಉದ್ದಿಮೆಗಳ ಆರೋಗ್ಯಕರ ಬೆಳವಣಿಗೆ ಬೇಕು.

ಬೃಹತ್ ಉದ್ದಿಮೆಗಳೊಡನೆ ಕಿರು ಮತ್ತು ಗೃಹ ಉದ್ದಿಮೆಗಳಿಗೆ ಯಾಕೆ ಮಹತ್ವ ಕೊಡಲೇಬೇಕೆಂಬುದು ಈ ಕೆಳಗಿನ ಅಂಶಗಳಿಂದ ವ್ಯಕ್ತವಾಗುತ್ತದೆ.

೧. ಬೃಹತ್ ಉದ್ದಿಮೆಗಳಿಗೆ ಬಂಡವಾಳ ಕೊರತೆ : ಬಂಡವಾಳದ ಕೊರತೆ ಇರುವಾಗ ಹೆಚ್ಚೆಚ್ಚು ಬೃಹತ್ ಉದ್ದಿಮೆಗಳ ಸ್ಥಾಪನೆ ಸಾಧ್ಯವಿಲ್ಲ. ಇಂತಹ ವೇಳೆಯಲ್ಲಿ ಕಿರು ಮತ್ತು ಗೃಹ ಉದ್ದಿಮೆ ಕಡಿಮೆ ಬಂಡವಾಳದಲ್ಲಿ ಹೆಚ್ಚು ಮಂದಿಗೆ ಉದ್ಯೋಗ ಲಭಿಸಿಕೊಡುತ್ತವೆ. ಸ್ವ ಉದ್ಯೋಗದಲ್ಲಿ ಪ್ರತಿಯೋರ್ವನಿಗೆ ಬರುವ ಖರ್ಚು ೧೦೦೦ರೂ. ಆದರೆ ಕಿರು ಉದ್ದಿಮೆ ವಿಭಾಗದಲ್ಲಿ ೫೦೦೦ರೂ. ದಿಂದ ೮೦೦೦ರೂ. ಪ್ರತಿ ಮನುಷ್ಯನಿಗೆ ಬೇಕಾಗುತ್ತದೆ. ಅದೇ ಮಶಿನ್ ಟೂಲ್ಸ

ಉದ್ದಿಮೆಗಳಲ್ಲಿ ಪ್ರತಿಯೋರ್ವನಿಗೆ ತಗಲುವ ವೆಚ್ಚ ೨೫,೦೦೦ ರೂ. ರಾಸಾಯನಿಕ ಗೊಬ್ಬರ ಉದ್ಯಮದಲ್ಲಿ ೪೦,೦೦೦ರೂ. ಬೃಹತ್ ಮಶಿನ್ ಬಿಲ್ಡಿಂಗ ಮತ್ತು ಕುಲಿಮೆ ಉದ್ದಿಮೆಗಳಲ್ಲಿ ೧,೦೦೦೦೦ ರೂ. ಕಬ್ಬಿಣ ಮತ್ತು ಉಕ್ಕು ಕಾರಖಾನೆ ೧,೬೦,೦೦೦ರೂ. ಈ ಎಲ್ಲ ವಿವರಣೆಯಿಂದ ನಮಗೆ ಲಭ್ಯ ವಾಗುವ ಸಂಗತಿ ಎಂದರೆ ಹೆಚ್ಚು ಉದ್ಯೋಗ ಲಭಿಸುವ ಕೃಷಿ ಅವಲಂಬಿತ ಉದ್ದಿಮೆಗಳ ಹಾಗೂ ಇತರ ಕಿರು ಮತ್ತು ಗುಡಿ ಕೈಗಾರಿಕೆಗಳ ಅಭಿವೃದ್ಧಿ ಹೆಚ್ಚು ಮಂದಿಗೆ ಉದ್ಯೋಗ ಕೊಡುವ ದೃಷ್ಟಿಯಿಂದ ಆವಶ್ಯ.

೨. ದೊಡ್ಡ ಪ್ರಮಾಣದ ನಿರುದ್ಯೋಗ ಮತ್ತು ಅರೆ ಉದ್ಯೋಗ : ಒಕ್ಕಲುತನದ ಮೇಲೆ ೭೦% ಜನ ಅವಲಂಬಿಸಿರುವರು. ಮೇಲಾಗಿ ಅವ್ಯಾಹತವಾಗಿ ಏರುವ ಜನಸಂಖ್ಯೆ ಮತ್ತು ಅದರ ಭಾರ ಭೂ ಪ್ರದೇಶದ ಮೇಲೆ, ತತ್ಪರಿಣಾಮವಾಗಿ ಭೂ ಹಿಡುವಳಿಯು ಸಣ್ಣ ಸಣ್ಣ ತುಣುಕು ಗಳು, ನಿರುದ್ಯೋಗ ಮತ್ತು ಅರೆ ಉದ್ಯೋಗ ಇವು ಹಳ್ಳಿಯ ಜೀವನಕ್ಕೆ ಹತ್ತಿದ ಕೆಲವು ಅಂಟು ರೋಗಗಳು. ಅರೆ ಉದ್ಯೋಗ ಹಾಗೂ ನಿರುದ್ಯೋಗದ ಪ್ರಮಾಣ ಕುರಿತು ನಾವು ಹಿಂದಿನ ಅಧ್ಯಾಯದಲ್ಲಿ ನೋಡಿರುವೆವಷ್ಟೇ. ಕನಿಷ್ಟ ಪಕ್ಷ ೪೦% ಜನ ಹಳ್ಳಿಗಳಲ್ಲಿ ಅರೆ ಉದ್ಯೋಗದಲ್ಲಿ ಇರುವರು. ಹೀಗೆ ದೊಡ್ಡ ಪ್ರಮಾಣದ ನಿರುದ್ಯೋಗದ ಹೊರತಾಗಿ ಹಿರಿದಾದ ಪ್ರಮಾಣದಲ್ಲಿ ಅರೆ ಉದ್ಯೋಗವಿದೆ. ಆದ್ದರಿಂದಲೇ ಇಂಥ ಜನಕ್ಕೆ ಒಂದು ಭಾಗಶಃ ವೇಳೆಯ

ಉದ್ಯೋಗ ಅವಶ್ಯ. ಆದ್ದರಿಂದ ಬೃಹತ್ ಉದ್ಯಮದ ಜೊತೆಗೇನೇ ಈ ಜನಕ್ಕೆ ಕೂಲಿ ಕೊಡುವ ಗ್ರಾಮೀಣ ಔದ್ಯೋಗೀಕರಣ ಅವಶ್ಯವಿದೆ.

೩. **ಗ್ರಾಮೀಣ ಜನತೆಯ ಬಡತನ**: ಗ್ರಾಮೀಣ ಜನತೆ ಬಡತನದಲ್ಲಿ ಇರುವವನ್ನು ನಾವು ಅವರ ದಿನನಿತ್ಯದ ಚಟುವಟಿಕೆಗಳಿಂದಲೇ ಕಂಡುಕೊಳ್ಳಬಹುದಾಗಿದೆ. 'ನ್ಯಾಶನಲ್ ಕೌನ್ಸಿಲ್ ಆಫ್ ಅಪ್ಲಾಯ್ಡ್ ಇಕೋನಾಮಿಕ್ ರಿಸರ್ಚ'ದವರು ಆರ್ಥಿಕ ಅಸಮಾನತೆ ಹಾಗೂ ಸಂಪತ್ತಿನ ಕೇಂದ್ರೀಕರಣದ ಮೇಲೆ ಮಾಡಿದ ಅಭ್ಯಾಸದ ಮೇಲಿಂದ ತಿಳಿದುಬರುವ ಅಂಶವೇದರೆ ೧% ಜನರು ರಾಷ್ಟ್ರೀಯ ಆದಾಯದ ೯% ಅನುಭವಿಸಿದರೆ, ಅತಿ ಕೆಳಮಟ್ಟದ ೫% ಜನಕ್ಕೆ ಏನೂ ಇಲ್ಲ. ಮತ್ತೊಂದು ಸಂಗತಿ ಎಂದರೆ ಭಾರತೀಯ ಜನರ ಜೀವನ ಮಟ್ಟವನ್ನು ಆಧರಿಸಿ ಹೇಳುವದಾದರೆ ೧೯೬೭-೬೮ರಲ್ಲಿ ಹಳ್ಳಿಯ ಜನಸಂಖ್ಯೆ ೭೦% ಜನ ಕಡು ಬಡತನದಲ್ಲಿ ಇತ್ತು. ಅವರ ಮಾಸಿಕ ತಲಾ ಅನುಭೋಗದ ಖರ್ಚು ೪೦ರೂ. ಗಳಿಗಿಂತಲೂ ಕಡಿಮೆ ಇತ್ತು. ಗಂಭೀರವಾಗಿ ವಿಚಾರಿಸುವಂತಹ ವಿಷಯವೆಂದರೆ, ಬಡತನ ೧೯೬೦-೬೧ರಿಂದ ಏರುತ್ತದೆ. ಉದಾ:- ೧೯೬೦-೬೧ರಲ್ಲಿ ಗ್ರಾಮೀಣ ಪ್ರದೇಶದಲ್ಲಿ ೫೨% ಜನ ಬಡವರಿದ್ದರೆ ೧೯೬೭-೬೮ ರಲ್ಲಿ ಗ್ರಾಮೀಣ ಬಡತನ ೭೦%ಕ್ಕೆ ಏರಿದೆ. ಇಂತಹ ಪರಿಸ್ಥಿತಿಯಲ್ಲಿ ಈ ಬಡತನವನ್ನು ದೂರ ಮಾಡುವ ಒಂದು ಕ್ರಮವೆಂದರೆ ಗ್ರಾಮೀಣ ಕೈಗಾರಿಕಾಕರಣ. ಒಕ್ಕಲುತನ ಅಭಿವೃದ್ಧಿಯೊಂದಿಗೆ ಇವಕ್ಕೆ ಸ್ಥಾನ ಲಭಿಸಬೇಕು.

೪. ಗ್ರಾಮೀಣ ಪ್ರದೇಶಗಳಿಂದ ಜನತೆಯು ಶಹರುಗಳಿಗೆ ವಲಸೆ ಹೋಗುವದು : ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗದ ಅಭಾವದ ತತ್ಪರಿಣಾಮವಾಗಿ ಜೀವನ ನಿರ್ವಹಣೆಯನ್ನು ಸಾಗಿಸುವುದೇ ಗಡುಚಾಗುವದು. ಅದೇ ರೀತಿ ಶಹರದಲ್ಲಿ ದೊರೆಯುವ ಒಳ್ಳೆಯ ಶಿಕ್ಷಣ ಹಾಗೂ ಇತರ ಸೌಲಭ್ಯಗಳು ಜನರನ್ನು ಹಳ್ಳಿಗಳಿಂದ ಶಹರುಗಳಿಗೆ ಆಕರ್ಷಿಸುತ್ತವೆ. ಇದರಿಂದ ಹಳ್ಳಿ ಹಾಗೂ ಶಹರ ಎರಡಕ್ಕೂ ಸಮಸ್ಯೆಗಳು. ಶಹರದಲ್ಲಿ ಅದೇ ಪ್ರಮಾಣದಲ್ಲಿ ನೌಕರಿಯ ಸೌಲಭ್ಯ ಏರಿಲ್ಲ. ಇಂತಹ ಜನತೆ ಕಳುವು, ದರೋಡೆ ಮತ್ತು ಇತರ ಸಾಮಾಜಿಕ ಅಪರಾಧದಲ್ಲೂ ತೊಡಗುತ್ತಾರೆ. ಇದು ಶಹರದ ಪ್ರಶ್ನೆ. ಆದರೆ ಹಳ್ಳಿಯ ಪ್ರಶ್ನೆಯೇ ಬೇರೆ. ಹಳ್ಳಿಗಳಿಂದ ಬಹಳ ಜನ ಶಹರಕ್ಕೆ ರವಾನೆ ಆಗುವುದರಿಂದ ಹಳ್ಳಿಗಳಲ್ಲಿ ಒಕ್ಕಲುತನ ನಿರ್ಲಕ್ಷಿಸಲ್ಪಡುವದು. ಹೆಚ್ಚಿನ ಶಿಕ್ಷಣ ಪಡೆದ ಜನ ಹಳ್ಳಿಗಳಿಗೆ ಹೋಗುವದನ್ನು ಅಲಕ್ಷಿಸುವದರಿಂದ ಶಿಕ್ಷಣದಿಂದ ದೊರೆಯುವ ಲಾಭ ಹಳ್ಳಿಗರಿಗೆ ದೊರೆಯದಾಗುವದು. ಇಂಥ ವೇಳೆಯಲ್ಲಿ ಹಳ್ಳಿಗಳಲ್ಲೇ ಲಭ್ಯವಿರುವ ಕಚ್ಚಾ ಸಾಮುಗ್ರಿಗಳ ಮೇಲೆ, ಅವರ ಮನೆಯಲ್ಲೇ ಉದ್ಯೋಗ ಕೊಡಬೇಕು. ಉದ್ಯೋಗ ಅವರ ಮನೆಗೆ ಹೋಗಬೇಕೇ ವಿನಃ ಅವರು ಉದ್ಯೋಗಕ್ಕಾಗಿ ಅಲೆಯುವಂತಾಗಬಾರದು. ಇದಕ್ಕಾಗಿ ಇತರ ಕೆಲವು ಕಿರು ಉದ್ದಿಮೆಗಳ ಅಭಿವೃದ್ಧಿಯನ್ನು ತೆಗೆದು ಕೊಳ್ಳಬೇಕು.

೫. ಗ್ರಾಮಗಳಿಗೆ ತಕ್ಕದಾದ ಉದ್ಯೋಗ : ಸದ್ಯದ ಪರಿಸ್ಥಿತಿಯಲ್ಲಿ ಬೃಹತ್ ಔದ್ಯೋಗೀಕರಣ ಖಂಡಿತವಾಗಿ ನಿರುದ್ಯೋಗವನ್ನು ಗ್ರಾಮೀಣ ಪ್ರದೇಶದಲ್ಲಿ ಏರಿಸುತ್ತದೆ. ಅದೇ ವೇಳೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಲಭ್ಯವಿರುವ ಸಾಧನ ಸಲಕರಣೆ, ಅಲ್ಲಿಯ ಪರಿಸ್ಥಿತಿ ಇವುಗಳನ್ನು ಗಮನದಲ್ಲಿ ಇಟ್ಟರೆ ಇದಕ್ಕೆ ದೇಶದ ಔದ್ಯೋಗೀಕರಣದಲ್ಲಿ ಖಂಡಿತವಾಗಿ ಯೋಗ್ಯವಾದ, ಪ್ರಶಸ್ತವಾದ ಸ್ಥಾನದ ಆವಶ್ಯಕತೆ ಕಂಡುಬರುವದು. ಅಮೇರಿಕಾದಂತ ದೇಶಗಳಲ್ಲಿ ಸಹ ಕಿರು ಉದ್ದಿಮೆಗಳು ತಮ್ಮತನವನ್ನು ಉಳಿಸಿಕೊಂಡು ಬಂದಿರುವದು ಗಮನಾರ್ಹವಾಗಿದೆ. ಅಮೇರಿಕಾದಲ್ಲಿ ಕಾರಖಾನೆಗಳಲ್ಲಿ ೯೨.೫% ಕಿರು ಯುನಿಟ್ಟುಗಳು ಇದ್ದು ಅವು ದೇಶದ ಕೆಲಸಗಾರರ ೪೫% ಜನರಿಗೆ ಉದ್ಯೋಗ ದೊರಕಿಸಿ ಕೊಟ್ಟಿದ್ದಿವೆ. ಹಾಗೂ ವ್ಯವಹಾರದ ೨೯% ಪ್ರಮಾಣ ಇವು ನಡೆಸಿ ಕೊಡುತ್ತವೆ. ಫ್ರಾನ್ಸದಲ್ಲಿ ಕಚ್ಚಾ ರೇಶ್ಮೆ ತಯಾರಿಕೆ, ವೃಕ್ಷಸಂಗೋಪನೆ, ಡೆನ್ಮಾರ್ಕದಲ್ಲಿ ಕ್ಷೀರ ಉದ್ದಿಮೆ, ಇಟಲಿ ಮತ್ತು ಹಾಲಂಡದಲ್ಲಿ ರೇಶ್ಮೆಹುಳ ಸಾಕಣೆ, ಕೋಳಿ ಸಾಕಣೆ ಹಾಗೂ ಸ್ವಿಜರಲಂಡದಲ್ಲಿ ಕೈಗಡಿಯಾರದ ಉದ್ದಿಮೆಗಳು ಆ ಆ ದೇಶದ ಅಭಿವೃದ್ಧಿಗೆ ದೊಡ್ಡ ಪ್ರಮಾಣದಲ್ಲಿ ಸಹಾಯ ಮಾಡಿವೆ. ಅಂದಾಗ ಭಾರತವು ಇಂತಹ ಉದ್ಯಮಗಳನ್ನು ಏಕೆ ಅಭಿವೃದ್ಧಿಪಡಿಸಬಾರದೆಂಬ ಪ್ರಶ್ನೆ ಸಹಜವಾಗಿಯೇ ಉದ್ಭವಿಸುವದು.

೬. ಹಿಂದುಳಿದ ಒಕ್ಕಲುತನ : ಬಹಳಷ್ಟು ಒಕ್ಕಲಿಗರ ಭೂ ಹಿಡುವಳಿ ಅತಿ ಕಿರಿದಾಗಿದೆ. ಅವರ ಆದಾಯದಲ್ಲಿ ಇನ್ನೂವರೆಗೆ ಹೇಳಿಕೊಳ್ಳುವಷ್ಟು ಪ್ರಗತಿ ಆಗಿಲ್ಲ. ಇಂತಹ ವೇಳೆಯಲ್ಲಿ ಅವರಿಗೊಂದು ಉದ್ಯೋಗ ಅವರ ಖಾಲಿ ವೇಳೆಯಲ್ಲಿ ಅವಶ್ಯವಿದೆ. ಇಂತಹ ಉದ್ಯೋಗ ನೀಡುವ ಸಾಮರ್ಥ್ಯ ಇರುವ ಒಂದೇ ಒಂದು ಉದ್ಯೋಗ ಎಂದರೆ ಗುಡಿ ಮತ್ತು ಕಿರು ಉದ್ದಿಮೆಗಳು. ಗ್ರಾಮೀಣ ರಸ್ತೆ ನಿರ್ಮಾಣ ಮತ್ತು ಇತರ ಕೆಲವು ಅಭಿವೃದ್ಧಿ ಕಾರ್ಯ ಕ್ರಮಗಳು ಇವರಿಗೆ ಉದ್ಯೋಗ ಕೊಡಬಹುದಾದರೂ ಸದಾ ಕಾಲ ಕೆಲಸ ಸಿಗಬೇಕಾದರೆ ಇವುಗಳ ಅಭಿವೃದ್ಧಿ ಅವಶ್ಯ.

ಹೀಗೆ ಈ ಮೇಲಿನ ವಿವರಣೆಯಿಂದ ವಿದಿತವಾಗುವ ಅಂಶವೆಂದರೆ ಬೃಹತ್ ಉದ್ಯಮೀಕರಣ ನೀತಿಯೊಡನೆ ಈ ಉದ್ಯಮಗಳಿಗೆ ಯೋಗ್ಯವಾದ ಸ್ಥಾನ ಲಭಿಸುವದರಿಂದ ಹಲವಾರು ಸಮಸ್ಯೆಗಳಿಗೆ ನಾವು ಪರಿಹಾರ ಕಂಡು ಕೊಂಡಂತಾಗುವದು. ಸಂಪತ್ತಿನ ಕೇಂದ್ರೀಕರಣ ತಪ್ಪಿಸು ವದು, ಗ್ರಾಮೀಣ ಬಡತನ ನಿವಾರಣೆ, ತನ್ಮೂಲಕ ಅವರ ಜೀವನ ಮಟ್ಟದಲ್ಲಿ ಸುಧಾರಣೆ ಶಕ್ಯವಿದೆ. ಆದ್ದರಿಂದ ನಮ್ಮ ಔದ್ಯೋಗೀಕರಣ ನೀತಿಯಲ್ಲಿ ಇವಕ್ಕೊಂದು ಭದ್ರ ಬುನಾದಿ ಯನ್ನು ಇಲ್ಲವೆ ಯೋಗ್ಯ ಸ್ಥಾನವನ್ನು ಅವರಲ್ಲಿ ಮಾಡು ವದು ಸೂಕ್ತ.

೫. ಗ್ರಾಮೋದ್ಯೋಗಗಳು ಮತ್ತು ಉತ್ತರ ಕನ್ನಡ ಜಿಲ್ಲೆ

'ಗುಡಿ ಕೈಗಾರಿಕೆಗಳು ಕೃಷಿಯೊಡನೆ ಸಂಬಂಧಪಿರಿಸಿ ಕೊಂಡಿರುತ್ತವೆ. ಮತ್ತು ಅವು ಭಾಗಶಃ ಉದ್ಯೋಗವನ್ನು ಗ್ರಾಮೀಣ ಪ್ರದೇಶಗಳಿಗೆ ನೀಡುತ್ತವೆ. ಕಿರು ಉದ್ದಿಮೆಗಳು ಸಾಮಾನ್ಯವಾಗಿ ಪೂರ್ಣವೇಳೆಯ ಉದ್ಯೋಗವನ್ನು ಅವುಗಳ ಕೆಲಸಗಾರನಿಗೆ ನೀಡುತ್ತವೆ ಮತ್ತು ಅವು ಶಹರ ಅಥವಾ ಶಹರದ ಹೊರವಲಯದಲ್ಲಿ ನೆಲೆಗೊಂಡಿರುತ್ತದೆ.'

— ರಾಜಾದಾವುದ ನಿಯೋಗ ೧೯೪೯-೫೦

ಉತ್ತರ ಕನ್ನಡ ಜಿಲ್ಲೆಯ ವಿಸ್ತಾರ ೧,೦೨೭೬ ಚ. ಕಿ. ಮೀ. ೧೯೭೧ರ ಜನಗಣತಿಯ ಪ್ರಕಾರ ಜನಸಂಖ್ಯೆ ೮,೪೯,೧೦೫, ಪ್ರತಿ ಚ.ಕಿ.ಮೀ.ಗೆ ಜನಸಂಖ್ಯೆ ಪ್ರಮಾಣ ೮೩. ಉತ್ತರ ಕರ್ನಾಟಕದಲ್ಲಿ ಇದೊಂದು ಕೈಗಾರಿಕೆಯಲ್ಲಿ ಹಿಂದುಳಿದ ಪ್ರದೇಶವಾಗಿದೆ. ಸುಮಾರು ೬೨.೮% ಜನ ಒಕ್ಕಲುತನದ ಮೇಲೆ ಅವಲಂಬಿಸಿರುವರು. ೧೩.೨% ಜನ ಒಕ್ಕಲುತನ ಹೊರತಾದ ಉತ್ಪಾದಕ ಚಟುವಟಿಕೆಯಲ್ಲಿ ತೊಡಗಿರುವರು. ೧೯೭೫ರ ಅಂಕೆಸಂಖ್ಯೆಗಳ ಆಧಾರದ ಮೇಲೆ ಹೇಳುವದಾದರೆ ಇಲ್ಲಿ ೪೬ ನೋಂದಣಿಯಾದ ಕಾರ್ಖಾನೆಗಳಿದ್ದು, ಉದ್ಯೋಗ ಪ್ರಮಾಣ ೪,೪೫೦. ಸಣ್ಣ ಮತ್ತು ಗ್ರಾಮಾಂತರ ಕೈಗಾರಿಕೆಗಳು ೩೩೮, ಕೈಮಗ್ಗಗಳು

೩೩೧, ರಾಸಾಯನಿಕ ಕಾರ್ಖಾನೆಗಳು ೧೯, ಇಂಜನಿಯರಿಂಗ್ ಕಾರ್ಖಾನೆಗಳು ೩ ಇವೆ. ಈ ಅಂಕೆಸಂಖ್ಯೆಗಳು ಉತ್ತರ ಕನ್ನಡದ ಕೈಗಾರಿಕೀಕರಣದ ಶೋಚನೀಯ ಸ್ಥಿತಿಯನ್ನು ತೋರಿಸುತ್ತದೆ.

ಉತ್ತರ ಕನ್ನಡದ ಸ್ವಾಭಾವಿಕ ಸಂಪತ್ತನ್ನು ಅವಲೋಕಿಸಿದರೆ ಕೆಲವು ವಿಶಿಷ್ಟ ಬಗೆಯ ಕಿರು ಉದ್ದಿಮೆಗಳ ಅಭಿವೃದ್ಧಿಗೆ ಇರುವ ದಾರಿ ನಮಗೆ ವ್ಯಕ್ತವಾಗದೇ ಇರದು. ಇದು ರಾಜ್ಯದಲ್ಲಿಯೇ ಅತಿ ಸಿರಿವಂತವಾದ ಅಡವಿಗಳನ್ನು ಹೊಂದಿರುವದು. ವಿಸ್ತೀರ್ಣ ೩೨೨೧.೨೧ ಚ. ಮೈಲುಗಳು. ಇದು ರಾಜ್ಯದ ೨೩.೭೫% ಇದ್ದು, ಜಿಲ್ಲೆಯ ೮೧.೩೧% ಸ್ಥಳವನ್ನು ಒಳಗೊಂಡಿರುತ್ತದೆ. ಈ ಅಡವಿಗಳಲ್ಲಿ ತೇಗು, ಬಿದಿರು ದೊಡ್ಡ ಪ್ರಮಾಣದಲ್ಲಿ ದೊರೆಯುತ್ತವೆ. ಇದಲ್ಲದೇ ಅನೇಕ ಜಾತಿಯ ಗಿಡಮರಗಳು ಮತ್ತು ಉರುವಲು ಕಟ್ಟಿಗೆ ಸಹ ವಿಪುಲವಾಗಿದೆ. ಅಲ್ಲಲ್ಲಿ ಮೆಣಸಿನ ಕಾಳು, ಏಲಕ್ಕಿ, ಜಾಜಿಕಾಯಿಯಂತಹ ವ್ಯಾಪಾರಿ ಬೆಳೆಗಳನ್ನು ಸಹ ಬೆಳೆಯಲಾಗುತ್ತದೆ. ತೊಲೆಗಳನ್ನು ಮುಂಬಯಿ ಅಥವಾ ನಮ್ಮ ರಾಜ್ಯದ ಇತರ ಸ್ಥಳಗಳಿಗೆ ಕಳಿಸಲಾಗುತ್ತದೆ.

ಕೈಗಾರಿಕಾ ಮಹತ್ವದ ಕೆಲವು ಒಕ್ಕಲುತನ ಹುಟ್ಟುವಳಿಗಳೆಂದರೆ, ಗೇರುಬೀಜ (೧೪೮೭ ಟನ್), ಅಡಿಕೆ (೮,೩೨೫ ಟನ್) ತೆಂಗಿನಕಾಯಿ (೨೧,೯೨೨ ಟನ್) ಮತ್ತು ಇತರ ಎಣ್ಣೆ ಕಾಳುಗಳು, ದೊಡ್ಡಪ್ರಮಾಣದಲ್ಲಿ ಮೀನು

ದೊರೆಯುತ್ತವೆ. ೧೯೫೯–೬೦ರಲ್ಲಿ ಈ ಜಿಲ್ಲೆಯ ಬಂದರುಗಳಲ್ಲಿ ೩,೧೭೭ ಟನ್ ಮೀನು ದೊರೆತಿತ್ತು

ಈ ಜಿಲ್ಲೆಯ ಕೆಲವು ಮಹತ್ವದ ಕೈಗಾರಿಕೆಗಳು ಈ ಕೆಳಗಿನಂತಿವೆ:

I ಅಡವಿ ಉದ್ಯಮಗಳು: ದಾಂಡೇಲಿಯ ವೆಸ್ಟ ಕೋಸ್ಟ ಪೇಪರ ಮಿಲ್ಸ್ - ಅಡವಿ ಸಂಪನ್ಮೂಲಗಳ ಮೇಲೆ ನಿಂತಿರುವ ಒಂದು ಮಹತ್ವದ ಉದ್ಯಮವಾಗಿದೆ. ಉತ್ತರ ಕನ್ನಡದ ಅಡವಿಗಳು ಸುಮಾರು ೧ ಲಕ್ಷ ಟನ್ ಬಿದಿರನ್ನು ಇದಕ್ಕೆ ಪೂರೈಸುತ್ತವೆ. ಇದು ಪ್ರತಿವರ್ಷ ಸುಮಾರು ೧೮,೦೦೦ ಟನ್ ಕಾಗದ ಉತ್ಪಾದಿಸುತ್ತಿದ್ದು, ಇದಕ್ಕೆ ೨೭,೦೦೦ ಟನ್ ಉತ್ಪಾದನಾ ಸಾಮರ್ಥ್ಯವಿದೆ. ಕ್ರಾಫ್ಟ (kraft) ಕಾಗದ ಪಲ್ಪ ಪ್ಲಾಂಟಿನ ಮೆಸರ್ಸ ಗ್ರೇಟರ ಮೈಸೂರ ರೆಯಾನ ಗ್ರೇಡ ಪಲ್ಪ ಮಿಲ್ ಲಿ. ನವರು ಸಿದ್ಧನಗುಂಡಿಯಲ್ಲಿ ಸ್ಥಾಪಿಸಿರುವರು.

ಎರಡನೇ ರೀತಿಯ ಅಡವಿ ಉದ್ಯಮವೆಂದರೆ, ದಾಂಡೇಲಿಯ ಇಂಡಿಯನ್ ಪದರು ಹಲಿಗೆ ಉತ್ಪಾದಿಸುವ ಕಂಪನಿ. ಇದು ಪ್ರತಿ ವರ್ಷ ಸುಮಾರು ೫,೦೦೦ ಟನ್ ಪದರು ಹಲಿಗೆಯನ್ನು ಉತ್ಪಾದಿಸುತ್ತದೆ ಪದರು ಹಲಿಗೆಯನ್ನು ಮುಂಬಯಿ, ಕಲಕತ್ತಾ, ದಿಲ್ಲಿ ಹಾಗೂ ನಮ್ಮ ರಾಜ್ಯದ ಬೇರೆ ಬೇರೆ ಭಾಗಗಳಿಗೆ ಕಳಿಸಲಾಗುತ್ತದೆ.

ಮೂರನೇ ರೀತಿಯು ಅಡವಿ ಉದ್ದಿಮೆಯೆಂದರೆ, ಕಟ್ಟಿಗೆ ಕೊರೆಯುವ ಗಿರಣಿಗಳು. ಇಂತಹ ದೊಡ್ಡ ಗಿರಣಿಗಳು ಬೇಲೇಕೇರಿ, ಕಿರವತ್ತಿ, ಮುಂಡಗೋಡ, ದಾಂಡೇಲಿಗಳಲ್ಲಿ ಕಾಣಬಹುದು.

II ಕಿರು ಉದ್ದಿಮೆಗಳು

೧. ಉಪ್ಪು ತಯಾರಿಕೆ : ತದಡಿ ಬಂದರಿನ ಸಮೀಪದ ಸಾಣೆಕಟ್ಟೆ ಪ್ರತಿವರ್ಷ ಸುಮಾರು ೧೨,೦೦೦ ಟನ್ ಉಪ್ಪನ್ನು ಉತ್ಪಾದಿಸುತ್ತದೆ. ಇದರ ಗರಿಷ್ಠ ಸಾಮರ್ಥ್ಯ ೧೫,೦೦೦ ಟನ್. ಚಿಕ್ಕಪ್ರಮಾಣದಲ್ಲಿ ಕಾಗಾಲ, ಬಾಡ, ಹಾಗೂ ಕುಮಟಾದಲ್ಲಿ ಸಹ ಉಪ್ಪು ತಯಾರಿಸಲಾಗುತ್ತದೆ.

೨. ಹಂಚಿನ ಉದ್ದಿಮೆಗಳು : ಕಾಸರಕೋಡ, ಗುಳ್ಳಾಪುರ, ಬಾಳೆಗುಳಿ, ಅಗಸೂರ, ಮಿರ್ಜಾನ ಮತ್ತು ಮಣಕಿಗಳಲ್ಲಿ ಈ ಕಾರ್ಖಾನೆಗಳು ಇವೆ. ಇವುಗಳಲ್ಲಿ ಕಾಸರಕೋಡ ಮತ್ತು ಮಣಕಿಯು ಕಾರ್ಖಾನೆಗಳು ಸಹಕಾರಿ ವಲಯದ ಕಾರ್ಖಾನೆಗಳಾಗಿವೆ. ಇದಲ್ಲದೇ ಗಾಂವಟಿ ಹಂಚುಗಳನ್ನು ಹಳಕಾರ, ಮುಂಡಗೋಡ ಇತ್ಯಾದಿಗಳಲ್ಲಿ ಮನೆ ಉದ್ಯಮದಂತೆ ನಡೆಸಿಕೊಂಡು ಹೋಗಲಾಗುತ್ತದೆ.

೩. ಎಣ್ಣೆ ಉದ್ದಿಮೆ : ಕಾರವಾರ, ಕುಮಟಾಗಳಲ್ಲಿ ಸೇಂಗಾ ಎಣ್ಣೆ ಗಿರಣಿಗಳಿವೆ. ಇವುಗಳಲ್ಲಿ ಹಲವು ಅತಿ ಚಿಕ್ಕ ಪ್ರಮಾಣದ ಗಿರಣಿಗಳಾಗಿವೆ. ಹಿಂದೊಮ್ಮೆ ಹಳ್ಳಿಗಳಲ್ಲಿ ಕಾಣಬರುತ್ತಿದ್ದ ಎಣ್ಣೆಗಾಣಗಳು ಇತ್ತಿತ್ತಲಾಗಿ ಬಹಳೇ ಕಡಿಮೆಯಾಗಿವೆ.

III ಕೃಷಿ ಉದ್ದಿಮೆಗಳು :

ಹಣ್ಣುಗಳ ಮೇಲೆ ಅವಲಂಬಿತ ಉದ್ದಿಮೆಗಳು :

ಈ ಜಿಲ್ಲೆಯಲ್ಲಿಯ ಅತಿ ಮಹತ್ವದ ಹಣ್ಣುಗಳೆಂದರೆ, ಮಾವಿನ ಹಣ್ಣು, ಬಾಳೆ ಹಣ್ಣು ಮತ್ತು ಗೇರ ಹಣ್ಣು. ಇವನ್ನು ಬಿಟ್ಟರೆ ಅನಂತರ ಬರುವ ಮಹತ್ವದ ಹಣ್ಣೆಂದರೆ ಅನಾನಸ.

ಈ ಜಿಲ್ಲೆಯಲ್ಲಿ ಮಾವಿನ ಕಾಯಿ ಸುಮಾರು ೧೮೦೦ ಎಕರೆ ಪ್ರದೇಶಗಳಲ್ಲಿ ಬೆಳೆಯುತ್ತಿದ್ದ ಉತ್ಪಾದನೆ ಸುಮಾರು ೪೩೩೫ ಮೆಟ್ರಿಕ್ ಟನ್ನುಗಳು. ಇವುಗಳಲ್ಲಿ ಬಹುದೊಡ್ಡ ಪ್ರಮಾಣ ಆಂತರಿಕವಾಗಿಯೇ ಅನುಭೋಗಿಸಲ್ಪಡುತ್ತದೆ. ಹೆಚ್ಚಿನದು ಹುಬ್ಬಳ್ಳಿ, ಬೆಳಗಾಂವಗಳಿಗೆ ಕಳಿಸಲಾಗುತ್ತದೆ. ಇಲ್ಲಿ ದೊರೆಯುವ ಮಹತ್ವದ ಮಾವಿನ ಹಣ್ಣುಗಳಲ್ಲಿ ಕರಿ ಇಷಾಡ, ಮಾಣಿಬಟ್ಟಾ, ಪಾಯರಿ ಹೆಸರುವಾಸಿಯಾಗಿವೆ. ಇದಲ್ಲದೆ ದೊಡ್ಡ ಪ್ರಮಾಣದಲ್ಲಿ ಗಾಂವಟಿ ಹಣ್ಣುಗಳು ಸಹ ಸಿಗುತ್ತವೆ. ಅಂಕೋಲೆಯಲ್ಲಿಯ ಒಂದು ಮಾವಿನ ಹಣ್ಣಿನ ಪಲ್ಪ ಕಾರ್ಖಾನೆ ಬಿಟ್ಟರೆ ಇಲ್ಲಿ ಈ ಸಂಪತ್ತನ್ನು ಉಪಯೋಗಿಸುವ ಉದ್ದಿಮೆಗಳೇ ಇಲ್ಲ. ಇವುಗಳ ಆಧಾರದ ಮೇಲೆ ಉಪ್ಪಿನಕಾಯಿ, ಹಣ್ಣಿನ ಜೇಮ್, ಪಲ್ಪ, ಚಟ್ನಿ ಇತ್ಯಾದಿಗಳನ್ನು ತಯಾರಿಸುವ ಉದ್ಯಮಗಳ ಸ್ಥಾಪನಗೆ ಅವಕಾಶವಿದೆ. ಆದರೆ ಮಾವಿನ ಹಣ್ಣು ಕೇವಲ ಮಾರ್ಚ,

ಎಪ್ರಿಲ್, ಮೇ ತಿಂಗಳುಗಳಲ್ಲಿ ಮಾತ್ರ ದೊರೆಯುತ್ತವೆ. ಆದ್ದರಿಂದ ಈ ಉದ್ದಿಮೆಗಳನ್ನು ಋತುಮಾನದ ಉದ್ದಿಮೆಗಳಂತೆ ನಡೆಸಿಕೊಂಡು ಹೋಗಬೇಕಾಗುತ್ತದೆ.

ಬಾಳೆ ಹಣ್ಣು ಈ ಜಿಲ್ಲೆಯಲ್ಲಿ ಸುಮಾರು ೫೨೦೫ ಎಕರೆಗಳಲ್ಲಿ ಬೆಳೆಯುತ್ತಿದ್ದು ಉತ್ಪಾದನೆ ಸುಮಾರು ೪೫,೦೦೦ ಟನ್ ಎಂದು ಅಂದಾಜಿಸಲಾಗಿದೆ. ಇವು ವರ್ಷದ ಎಲ್ಲಾ ಕಾಲದಲ್ಲೂ ದೊರೆಯುತ್ತವೆ. ಇವುಗಳ ಆಧಾರದ ಮೇಲೆ :

೧. **ಹಣ್ಣು ಪುಡಿ :** ಪುಡಿಯನ್ನು ಬಾಳೆಕಾಯಿಯಿಂದ ಮಾಡಲಾಗುತ್ತದೆ. ಒಣಗಿಸಿದ ಬಾಳೆ ಕಾಯಿ ತುಂಡುಗಳನ್ನು ಗಿರಣಿಯಲ್ಲಿ ಪವಡರ ಮಾಡಲಾಗುತ್ತದೆ. ಇಳುವರಿ ತಾಜಾ ಕಾಯಿಯ ೧೩.೨೭%. ಇದನ್ನು ಮಗುವಿನ ಆಹಾರದಲ್ಲಿ ಉಪಯೋಗಿಸಲಾಗುತ್ತದೆ.

೨. **ಸುಕೇಳಿ** : ಬಾಳೆಹಣ್ಣುಗಳನ್ನು ಸುಲಿದು ನೇರವಾಗಿ ಕತ್ತರಿಸಿ ಅದನ್ನು ೧" ಭಾಗಗಳಾಗಿ ಮಾಡಿ ಬಿಸಿಲಿನಲ್ಲಿ ಚೆನ್ನಾಗಿ ಒಣಗಿಸಿ ಪ್ಲಾಸ್ಟಿಕ್ ಚೀಲಗಳಲ್ಲಿ ಹಾಕಿ ಬೇರೆ ಪ್ರದೇಶಗಳಿಗೆ ಕಳಿಸಬಹುದು. ತಿನ್ನಲು ರುಚಿಕಟ್ಟಾದ ಇವುಗಳಲ್ಲಿ ಸಕ್ಕರೆಯ ಪ್ರಮಾಣ ೫೦%. ಸಿದ್ದಾಪುರದಲ್ಲಿ ಚಿಕ್ಕಪ್ರಮಾಣದಲ್ಲಿ ಇದನ್ನು ತಯಾರಿಸಲಾಗುತ್ತಿದೆ.

ಬಾಳೆ ಕಾಯಿ ಪುಡಿ ಈ ಜಿಲ್ಹೆಯಲ್ಲಿ ಎಲ್ಲಿಯೂ ತಯಾರಿಸಲಾಗುತ್ತಿಲ್ಲ. ಆದ್ದರಿಂದ ಇದನ್ನು ಉತ್ಪಾದಿಸುವ ಉದ್ಯಮ

ವನ್ನು ಪ್ರೋತ್ಸಾಹಿಸಲು ಸಾಧ್ಯತೆಗಳಿವೆ. ಅದೇ ರೀತಿ ಸುಣ್ಣ ಯನ್ನು ಉತ್ಪಾದಿಸಲು ಸಹ ಸಾಧ್ಯತೆ ಇದೆ.

ನಮ್ಮಲ್ಲಿ ಸುಮಾರು ೧೭೦ ಮೆಟ್ರಿಕ್ ಟನ್ ಅನಾನಸು ಉತ್ಪಾದನೆಯಾಗುತ್ತದೆ. ಇತ್ತೀಚೆಗೆ ಸರಕಾರದ ಪ್ರೋತ್ಸಾಹ ದಿಂದ ಇದರ ಉತ್ಪಾದನೆ ಇನ್ನೂ ಹೆಚ್ಚಾಗಿದೆ. ಇದನ್ನು ಉಪಯೋಗಿಸಿ ಪಾನೀಯವನ್ನು ಮಾಡುವ ಒಂದು ಉದ್ಯಮ ಸಿರಸಿಯಲ್ಲಿ ಇದೆ. ಇನ್ನು ಇದನ್ನು ಉಪಯೋಗಿಸಿ ಜೆಮ್ ತಯಾರಿಕೆಯ ಉದ್ಯಮವನ್ನು ಸ್ಥಾಪಿಸಲು ಇಲ್ಲಿ ಬಹಳೇ ಪ್ರೋತ್ಸಾಹದಾಯಕ ವಾತಾವರಣ ಇದೆ.

ಕತ್ತದ ಉದ್ದಿಮೆ : ಎರಡನೇ ಯೋಜನೆಯಲ್ಲಿ ೫ ಕತ್ತದ ಸಹಕಾರಿ ಸಂಘಗಳನ್ನು ಸ್ಥಾಪಿಸಲಾಯಿತು. ಅನಂತರ ಕೆಲವನ್ನು ಇದಕ್ಕೆ ಕೂಡಿಸಲಾಯಿತು. ಕತ್ತದಿಂದ ಕಾಲು ಜಾಡ್ಡುವ ಚಾಪೆ, ಹಗ್ಗ ಇತ್ಯಾದಿಗಳನ್ನು ಮಾಡಲಾಗುತ್ತದೆ. ಇತ್ತೀಚೆಗೆ ಕುಮಟೆಯಲ್ಲಿ ಒಂದು ಕಾರ್ಖಾನೆ ಸ್ಥಾಪನೆ ಯಾಗಿದ್ದು ಅದು ಕೇವಲ ಕಾಯಿ ಸಿಪ್ಪೆಯಿಂದ ಕತ್ತವನ್ನು ತಯಾರಿಸುತ್ತದೆ. ಕತ್ತವನ್ನು ಅದು ಹೊರಕಳಿಸುತ್ತದೆ. ಇದನ್ನು ಹೊರಕಳಿಸುವ ಬದಲು ಇದನ್ನು ಉಪಯೋಗಿಸಿ ಸಿದ್ಧವಸ್ತುಗಳನ್ನು ಉದಾ– ಕಾಲುಜಾಡ್ಡುವ ಚಾಪೆ, ಹಗ್ಗ ಇತ್ಯಾದಿಗಳನ್ನು ಉತ್ಪಾದಿಸುವ ಕಾರ್ಖಾನೆ ಸ್ಥಾಪಿಸುವ ಸಾಧ್ಯತೆ ಇದೆ. ಜನರಿಗೆ ಈ ಉದ್ಯಮದ ಬಗ್ಗೆ ತರಬೇತಿ ಕೊಡಲು ಸರಕಾರ ಕುಮಟೆ ಮತ್ತು ಹೊನ್ನಾವರದಲ್ಲಿ ಒಂದೊಂದು ಕತ್ತದ ಶಾಲೆಗಳನ್ನು ತೆರೆದಿದೆ.

IV ಇತರ ಉದ್ದಿಮೆಗಳು :

ಚರ್ಮದ ಉದ್ದಿಮೆ : ಕುಮಟೆಯಲ್ಲಿ ಚರ್ಮ ಉತ್ಪಾದಕರ ಸಹಕಾರಿ ಸಂಘವಿದೆ. ಆದರೆ ಈ ಉದ್ದಿಮೆಯನ್ನು ಶಾಸ್ತ್ರೀಯ ರೀತಿಯಲ್ಲಿ ನಡೆಸಿಕೊಂಡು ಹೋಗಲು ಒಂದು ಕಿರು ಪ್ರಮಾಣದಲ್ಲಿ ಉದ್ದಿಮೆ ಸ್ಥಾಪಿಸಿ ಅದರ ಮೂಲಕ ಪಾದರಕ್ಷೆ, ಚೀಲಗಳು ಇತ್ಯಾದಿ ಉತ್ಪಾದಿಸುವ ಸಾಧ್ಯತೆ ಇದೆ.

ಕರಕುಶಲ ಉದ್ದಿಮೆಗಳು : ಉತ್ತರ ಕನ್ನಡದಲ್ಲಿ ಬರುವ ಕರಕುಶಲ ಉದ್ದಿಮೆಗಳೆಂದರೆ, ಗಂಧದ ಕೆತ್ತನೆ, ಬೆತ್ತದ ವಸ್ತುಗಳು, ಬಿದಿರಿನ ವಸ್ತುಗಳು, ಬಂಗಾರ, ಬೆಳ್ಳಿ ಒಡವೆ ತಯಾರಿಕೆ ಇತ್ಯಾದಿಗಳಾಗಿವೆ. ಇವೆಲ್ಲವೂ ಗುಡಿ ಕೈಗಾರಿಕೆಗಳಾಗಿವೆ. ಕೈಮಗ್ಗದ ಉದ್ದಿಮೆ ಇನ್ನೊಂದು ಮಹತ್ವದ ಉದ್ದಿಮೆಯಾಗಿದೆ. ಇತರ ಚಿಕ್ಕ ಉದ್ಯಮಗಳೆಂದರೆ, ಜೇನು ಸಾಕುವದು, ಕೋಳಿ ಸಾಕುವದು, ದನಗಳ ಸಾಕಣೆ ಇತ್ಯಾದಿ ಇತ್ತೀಚಿಗೆ ಸಿರಿಸಿಯಲ್ಲಿ ಇಲೆಕ್ಟ್ರಿಕ್ ಬಲ್ಬ ಕಾರ್ಖಾನೆ ಸ್ಥಾಪನೆಯಾಗಿದೆ. ಅದೇ ರೀತಿ ಸಾಯಿಕಲ್ ಬಿಡಿ ಭಾಗಗಳನ್ನು ಬೇರೆಕಡೆಯಿಂದ ತರಿಸಿ ಅವುಗಳನ್ನು ಹೊಂದಿಸಿ ಸೈಕಲ್ ತಯಾರಿಸುವ ಒಂದು ಚಿಕ್ಕ ಉದ್ದಿಮೆ ಕುಮಟೆಯಲ್ಲಿ ಸ್ಥಾಪನೆಯಾಗಿದೆ.

V. ಇನ್ನು ಯಾವ ಉದ್ದಿಮೆ ಸ್ಥಾಪಿಸಬಹುದು ?

ಈ ಜಿಲ್ಲೆಯಲ್ಲಿ ಈ ಕೆಳಗಿನ ಉದ್ಯಮಗಳ ಸ್ಥಾಪನೆಗೆ ಅವಕಾಶವಿದೆ.

೧. ಗೃಹ ಬೆಂಕಿ ಪೆಟ್ಟಿಗೆ ಉದ್ಯಮ
೨. ಲಿಂಪೋ ತಯಾರಿಕೆ
೩. ಶಾಬು
೪. ಮೊಳೆ, ಬೋಲ್ಟ, ನಟ್, ಸ್ಕ್ರೂ ಇತ್ಯಾದಿ
೫. ಛತ್ರಿ ತಯಾರಿಕೆ
೬. ನಾರಿನ ಉದ್ಯಮ
೭. ಮೀನಿನ ಗೊಬ್ಬರ
೮. ಕಾರ್ಡಬೋರ್ಡ (ಕಟ್ಟಿಗೆ ಪುಡಿ, ಕಬ್ಬಿನ ಸಿಪ್ಪೆ ಉಪಯೋಗಿಸಿ)

೬. ಮುಗಿಸುವ ಮೊದಲು

'ದೇಶದ ಕಚ್ಚಾ ಸಾಮಗ್ರಿಗಳನ್ನು ಶೋಷಣೆ ಮಾಡಿಕೊಂಡು, ಸಾಮರ್ಥ್ಯದಿಂದ ಹೆಚ್ಚು ಶಕ್ತಿದಾಯಕವಾದ ಮಾನವ ಶಕ್ತಿಯನ್ನು ಅಲಕ್ಷಿಸಿದ ಯಾವುದೇ ಯೋಜನೆ

ಮಾನವ ಸಮಾನತೆಯನ್ನು ಅಥವಾ ದೇಶಕ್ಕೆ ನಿಜವಾಗಿ ಆನಂದ ಮತ್ತು ಅಭ್ಯುದಯವನ್ನು ತರುವದಿಲ್ಲವೆಂಬುದು ಸ್ಪಷ್ಟವಾಗಿಯೇ ಇದೆ.

........ಭಾರತಕ್ಕೆ ಸಂಬಂಧಿಸಿದಂತೆ ನಿಜವಾದ ಯೋಜನೆಯು ಸಂಪೂರ್ಣ ಮಾನವ ಶಕ್ತಿಯ ಯೋಗ್ಯ ಉಪಯೋಗ ಮತ್ತು ಅದರ ಸಾಧನ ಸಂಪತ್ತನ್ನು......... ಅಸಂಖ್ಯಾತ ಹಳ್ಳಿಗಳಿಗೆ ವಸ್ತುಗಳಲ್ಲಿ ಉತ್ಪಾದನೆಯಾಗುವಂತೆ ವಿತರಣೆ ಮಾಡಬೇಕೆ ವಿನಃ ಹಳ್ಳಿಗಳಿಂದ ಹೊರ ಕಳಿಸುವದು ಅಥವಾ ಸಿದ್ಧ ವಸ್ತುಗಳನ್ನು ಹೆಚ್ಚಿನ ಬೆಲೆಗೆ ಕೊಳ್ಳುವಂತೆ ದೇಶದಿಂದ ರಫ್ತು ಮಾಡುವದು ಇರಬಾರದು.'

—ಮಹಾತ್ಮಾ ಗಾಂಧಿ

ನಮ್ಮ ದೇಶದಲ್ಲಿನ ಗುಡಿ ಮತ್ತು ಕಿರು ಉದ್ದಿಮೆಗಳ ಇತ್ತೀಚಿನ ಪ್ರಗತಿಯನ್ನು ನೋಡಿದರೆ ಅಷ್ಟೊಂದು ತೃಪ್ತಿಕರವಿರುವುದೆಂದು ಕಾಣುವುದಿಲ್ಲ. ಇದಕ್ಕೆ ಕಾರಣಗಳಿಲ್ಲದೆ ಇಲ್ಲ. ಆದರೆ ಆ ಕಾರಣಗಳನ್ನು ಪಕ್ಷಪಾತವಿಲ್ಲದೆ, ಯಾವುದೇ ಪೂರ್ವ ಗ್ರಹಪೀಡಿತ ದೃಷ್ಟಿಯಿಂದ ಅವಲೋಕಿಸಿದರೆ ಇದಕ್ಕೆ ಕಾರಣವಾದ ಹಲವಾರು ಸಮಸ್ಯೆಗಳನ್ನು ಸರಕಾರ ಬಿಡಿಸುತ್ತಿದೆ. ಮೇಲಾಗಿ ಸರಕಾರ ಕೈಕೊಂಡ ಕ್ರಮಗಳನ್ನು ಅವಲೋಕಿಸಿದರೆ, ಸರಕಾರ ಈ ದಿಶೆಯಲ್ಲಿ ತನ್ನ ಕೈಲಾದುದೆಲ್ಲವನ್ನು ಮಾಡುತ್ತಿದೆ ಎಂಬುದು ನಮಗೆ

ತಿಳಿಯುತ್ತದೆ. ಗ್ರಾಮೀಣ ಔದ್ಯೋಗೀಕರಣದ ಬೆಳವಣಿಗೆಗೆ ಖಾದಿ ಮತ್ತು ಗ್ರಾಮೋದ್ಯೋಗದವರು ಹಮ್ಮಿಕೊಂಡಿರುವ ಕಾರ್ಯಕ್ರಮಗಳನ್ನು ನೋಡಿದರೆ ಅವರು ಈ ವಿಷಯದಲ್ಲಿ ಅದೆಷ್ಟು ಪ್ರಯತ್ನ ಮಾಡುತ್ತಿರುವರೆಂದು ಗೋಚರಿಸದೇ ಇರದು. ೧೯೬೯ ಜುಲೈ ೧೯ ರಂದು ೧೪ ಹಿರಿಯ ಬ್ಯಾಂಕುಗಳ ರಾಷ್ಟ್ರೀಕರಣದ ಅನಂತರ ಭಾರತದ ಆರ್ಥಿಕತೆಯಲ್ಲಿ ಹೊಸದೊಂದು ಅಧ್ಯಾಯ ಆರಂಭವಾಗಿದೆ. ಇವು ಹಾಗೂ ಇತರ ಕೆಲವು ಬ್ಯಾಂಕುಗಳು ಸಹ ತಮ್ಮ ಸ್ವ ಉದ್ಯೋಗ ಕಾರ್ಯಕ್ರಮಾನುಸಾರ ಸಾಲ ಸೌಲಭ್ಯ ಹಾಗೂ ತಾಂತ್ರಿಕ ಸಹಾಯ ಕೊಡಲು ಮುಂದಾಗಿವೆ. ಹೀಗಿದ್ದರೂ ಸಹ ಈ ಅಲಕ್ಷ್ಯ ನಮ್ಮ ಜನರಲ್ಲಿ ಏಕೆ ಬೇರೂರಿದೆ ಎಂಬ ಸಹಜ ಪ್ರಶ್ನೆ ಮುಂದಾಗುತ್ತದೆ.

ಈ ಮಂದ ಪ್ರಗತಿ ಏಕೆ? ಎಂದು ಪ್ರಶ್ನಿಸಿದರೆ ತತ್‌ಕ್ಷಣ ಬರುವ ಉತ್ತರವೆಂದರೆ, ೧) ಕಚ್ಚಾ ವಸ್ತುಗಳ ಕೊರತೆ ಹಾಗೂ ಅದು ವೇಳೆಗೆ ಸರಿಯಾಗಿ ಪೂರೈಕೆಯಾಗದಿರುವದು ೨) ಸಿದ್ಧವಸ್ತುಗಳ ಬೆಲೆ ಹೆಚ್ಚು; ಗುಣಮಟ್ಟ ಕಡಿಮೆ; ತತ್ಪರಿಣಾಮ ಮಾರುಕಟ್ಟೆ ಸಿಗದಿರುವದು ೩) ಸಾಲ ಸೌಲಭ್ಯ ವೇಳೆಗೆ ಸರಿಯಾಗಿ ದೊರೆಯದಿರುವದು ೪) ತಾಂತ್ರಿಕ ಸೌಲಭ್ಯ ನಿರೀಕ್ಷಿಸಿದ ಮಟ್ಟ ಮುಟ್ಟಿಲ್ಲ; ಇತ್ಯಾದಿ. ಆದರೆ ಈ ಎಲ್ಲ ಕಾರಣಗಳಿಗಿಂತ ಅತಿ ಮಹತ್ವದ ಕಾರಣ ಎಂದರೆ ನಮ್ಮ ಜನರ ನಿರ್ಲಕ್ಷ್ಯ ಮನೋಭಾವ. ಸರಕಾರ, ಖಾದಿ ಹಾಗೂ ಗ್ರಾಮೋದ್ಯೋಗ ಮಂಡಳಿಗಳು

ಮತ್ತು ಇತರ ಕೆಲವು ಸಂಸ್ಥೆಗಳು ಪರ್ಸೋ ಮಾಡುತ್ತಿವೆ. ನಾವೇಕೆ ಅಷ್ಟು ಆಸ್ಥೆ ವಹಿಸಬೇಕೆಂಬ ಮನೋಭಾವ. ಈ ಎಲ್ಲ ಕ್ರಮಗಳು ತಮಗಾಗಿ, ತಾವು ಇದರಲ್ಲಿ ಭಾಗವಹಿಸ ಬೇಕು. ಈ ಕ್ರಮಗಳ ಅನುಷ್ಠಾನದಲ್ಲಿ ತಾವು ಸರಕಾರದ ಕೈಗಳನ್ನು ಬಲಿಷ್ಟಪಡಿಸಬೇಕು ಎಂಬ ವಿಚಾರ ನಮ್ಮ ಹಳ್ಳಿಗರಿಗೆ ಇಲ್ಲವಾಗಿದೆ. ಯಾವುದೇ ಆರ್ಥಿಕ ಕ್ರಮ ಜಯಪ್ರದವಾಗಬೇಕಾದರೆ ಹಣಕ್ಕಿಂತ ಮಹತ್ವದ ಅಂಶ ವೆಂದರೆ ಜನರಿಗೆ ಆ ಆರ್ಥಿಕ ಕ್ರಮಗಳಲ್ಲಿ ಇರುವ ಆಸಕ್ತಿ, ಮಾನವ ತನ್ನ ಕನಸನ್ನು, ವ್ಯಕ್ತಿ ವೈಶಿಷ್ಟ್ಯಗಳನ್ನು, ಸಾಮಾಜಿಕ ಅಗತ್ಯಗಳಿಗನುಸಾರವಾಗಿ ಹೊಂದಿಸಿಕೊಂಡು ಹೋಗಲು ಕಲಿಯಬೇಕು. ಇಲ್ಲಿ ಮಹಾತ್ಮಾಗಾಂಧಿಯವರ ಒಂದು ಮಾತು ಸಮಯೋಚಿತವಾಗಿದೆ.

‘ನಾನು ವ್ಯಕ್ತಿ ಸ್ವಾತಂತ್ರ್ಯಕ್ಕೆ ಬೆಲೆ ಕೊಡುತ್ತೇನೆ. ಆದರೆ ಮಾನವನು ಅಗತ್ಯವಾಗಿ ಸಾಮಾಜಿಕ ಪ್ರಾಣಿ ಎಂಬು ದನ್ನು ನೀವು ಮರೆಯಬಾರದು. ಅವನು ತನ್ನ ವ್ಯಕ್ತಿತ್ವ ವನ್ನು ಸಮಾಜದ ಅಭಿವೃದ್ಧಿಯ ಅಗತ್ಯಗಳಿಗನುಸಾರವಾಗಿ ಹೊಂದಿಕೊಳ್ಳಲು ಕಲಿತು ಈ ಸದ್ಯದ ಮಟ್ಟಕ್ಕೆ ಅವನು ಏರಿರುವನು. ನಿಯಂತ್ರಣವಿಲ್ಲದ ವ್ಯಕ್ತಿವಾದವು ಅರಣ್ಯದಲ್ಲಿ ಇರುವ ಮೃಗಗಳ ನಿಯಮವಾಗಿದೆ. ನಾವು ವ್ಯಕ್ತಿ ಸ್ವಾತಂತ್ರ್ಯ ಮತ್ತು ಸಾಮಾಜಿಕ ನಿಗ್ರಹಗಳ ನಡುವೆ ದಾರಿ ಹುಡುಕಲು ಕಲಿಯಬೇಕು’ ಹೀಗೆ ಮನುಷ್ಯ ತಾನು ಸರ ಕಾರದ ಕ್ರಮಗಳಿಗೆ ಸಹಕಾರ ಕೊಡಲೇಬೇಕು. ಆದಿಲ್ಲ

ದಿದ್ದರೆ ಸರಕಾರದ ಕ್ರಮಗಳಿಗೆ ಹೊಳೆಯಲ್ಲಿ ತೊಳೆದ ಹುಣಸೆ ಹಣ್ಣಿನ ಗತಿಯಾಗುತ್ತದೆ ಎಂಬುದಕ್ಕೆ ಸಂಶಯವೇ ಇಲ್ಲ.

ನಿಜ, ಇತರ ಸಂಗತಿಗಳ ಬಗ್ಗೆ ಸಹ ನಾವು ಲಕ್ಷ್ಯವಹಿಸಬೇಕು. ಉದಾ – ಸಿದ್ಧವಸ್ತುಗಳ ಮಾರುಕಟ್ಟೆ ವಿಷಯದಲ್ಲಿ ಸೂಕ್ತವಾದ ಕ್ರಮ ತೆಗೆದುಕೊಳ್ಳಬೇಕು. ಇವೆಲ್ಲವುಗಳ ಆಧಾರಸ್ತಂಭ ಮೊಟ್ಟ ಮೊದಲು ಜನರಿಗೆ ಇವುಗಳಲ್ಲಿ ಆಶೆ ಆಸಕ್ತಿಗಳನ್ನು ಹೆಚ್ಚಿಸುವದೇ ಆಗಿದೆ. ಇದ್ದುದರಲ್ಲಿಯೇ ತೃಪ್ತಿಪಟ್ಟು ಕೈ ಕಟ್ಟಿ ಕುಳಿತು ಉದ್ಯೋಗವನ್ನೇ ಹಳಿಯುವ ಮನೋವೃತ್ತಿ ಕಡಿಮೆಯಾಗಬೇಕು. ಇಂತಹ ವೇಳೆಯಲ್ಲಿ ಗ್ರಾಮೀಣ ವಿದ್ಯಾವಂತರ ಪಾತ್ರ ಅತಿ ಮಹತ್ವದ್ದಾಗಿದೆ. ವಿದ್ಯಾವಂತರು ಕೇವಲ ಉದ್ಯೋಗ ನಿರೀಕ್ಷಣೆಯಲ್ಲಿ ತೊಡಗದೆ ಬ್ಯಾಂಕುಗಳು ನೀಡುವ ಸಾಲ ಸೌಲಭ್ಯಗಳ ಸಹಾಯ ಪಡೆದು ಹಳ್ಳಿ ಮತ್ತು ಸಣ್ಣ ಶಹರಗಳಲ್ಲಿ ಇಂತಹ ಉದ್ದಿಮೆಗಳನ್ನು ಸ್ಥಾಪಿಸಲು ಮುಂದಾಗಬೇಕು. ಸರಕಾರ ಈ ರೀತಿಯ ಉದ್ಯಮ ಸ್ಥಾಪಿಸುವವರಿಗೆ ಹಲವಾರು ಸಾಲ ಸೌಲಭ್ಯಗಳನ್ನು ನೀಡುತ್ತದೆ ಇಂಥವುಗಳಲ್ಲಿ ಮುಖ್ಯವಾದವುಗಳೆಂದರೆ, ಇಂಡಸ್ಟ್ರಿಯಲ್ ಇಸ್ಟೇಟಗಳ ಸ್ಥಾಪನೆ ಹಾಗೂ ಅಂಥ ಸ್ಥಳಗಳಲ್ಲಿ ಸ್ಥಾಪಿಸಿದ ಕಿರು ಉದ್ದಿಮೆಗಳಿಗೆ ಸರ್ವ ರೀತಿಯ ಸೌಲಭ್ಯಗಳನ್ನು ಒದಗಿಸುವುದು. ಕೆಲವು ಜಿಲ್ಲೆಗಳನ್ನು ಕೈಗಾರಿಕೆಯಲ್ಲಿ ಹಿಂದುಳಿದವುಗಳೆಂದು ಸಾರಿ ಅಂಥ ಸ್ಥಳಗಳಲ್ಲಿ ಸ್ಥಾಪಿತವಾಗುವ ಕೈಗಾರಿಕೆಗಳಿಗಂತೂ

ನೀಡುವ ಸೌಕರ್ಯ ನೋಡಿದರೆ ಅಂಥವುಗಳ ಸ್ಥಾಪನೆ ಅಷ್ಟೊಂದು ಕಷ್ಟದ ಕೆಲಸವಲ್ಲ ಎಂದು ಕಾಣುತ್ತದೆ. ಇವೆಲ್ಲವುಗಳನ್ನು ಲಕ್ಷ್ಯದಲ್ಲಿ ಇರಿಸಿಕೊಂಡು ಜನತೆ ಮುಂದೆ ಬರಬೇಕು.

ಕೆಲವು ಉತ್ಸಾಹಿ ತರುಣರು ಕೂಡಿಕೊಂಡು ಆ ಹಳ್ಳಿಗಳಿಗೊಂದು 'ಗ್ರಾಮೀಣ ಸುಧಾರಣೆ ಮತ್ತು ಯೋಜನಾ ವೇದಿಕೆ' ಎಂಬ ಒಂದು ಸಮಿತಿ ರಚಿಸಿಕೊಳ್ಳಬೇಕು. ಈ ಸಮಿತಿಯಲ್ಲಿ ಅಲ್ಲಿ ಇರುವ ಸಹಕಾರಿ ಸಂಘಗಳು, ಗ್ರಾಮ ಪಂಚಾಯತ ಮತ್ತು ಇತರ ಸಾಮಾಜಿಕ ಸಂಸ್ಥೆಗಳಿಗೆ ಯೋಗ್ಯ ಸ್ಥಾನ ಲಭಿಸಬೇಕು. ಅನಂತರ ಆ ಎಲ್ಲ ಗ್ರಾಮಗಳ ಜನಸಂಖ್ಯೆ ಎಷ್ಟು? ಅವರಲ್ಲಿ ಎಷ್ಟು ಮಂದಿ ಉದ್ಯೋಗದಲ್ಲಿ ಇದ್ದಾರೆ? ಎಷ್ಟು ನಿರುದ್ಯೋಗಿಗಳು? ಅರೆ ಉದ್ಯೋಗದ ಪ್ರಮಾಣವೇನು? ಇತ್ಯಾದಿಗಳನ್ನು ಅಭ್ಯಸಿಸಬೇಕು. ಗ್ರಾಮಗಳಲ್ಲಿ ದೊರೆಯುವ ಕಚ್ಚಾ ಸಾಮಗ್ರಿಗಳು, ಅವುಗಳ ಪ್ರಮಾಣಗಳ ವಿಷಯವಾಗಿ ಸಹ ಅಂಕೆ ಸಂಖ್ಯೆ ಸಂಗ್ರಹಿಸಬೇಕು. ಅದರ ಮೇಲಿಂದ ಯಾವ ಉದ್ಯಮಗಳನ್ನು ಸ್ಥಾಪಿಸಲು ಸಾಧ್ಯವಿದೆ ಎಂಬುದನ್ನು ತಿಳಿಯಬೇಕು. ಈ ಗ್ರಾಮಗಳಲ್ಲಿ ಈಗಾಗಲೇ ಗೃಹ ಕೈಗಾರಿಕೆಗಳು ಯಾವವು ಇವೆ? ಅವುಗಳ ಸ್ಥಿತಿ ಏನಾಗಿದೆ? ಎಂಬ ಅಂಶ ಸರಿಯಾಗಿ ತಿಳಿದುಕೊಳ್ಳಬೇಕು. ಎಲ್ಲ ಗ್ರಾಮಗಳೂ ಕೂಡಿ ಒಂದು ಕುಟುಂಬವಾಗಬೇಕು. ನಿಜವಾದ ಯೋಜನೆ ಮಾನವ

ಶಕ್ತಿಯ ಯೋಗ್ಯ ಉಪಯೋಗವನ್ನು ಅಳವಡಿಸಿಕೊಳ್ಳು ವಂತಿರಬೇಕು. ಮಹಾತ್ಮಾ ಗಾಂಧಿಯವರ ಮಾತಿನಲ್ಲಿ 'ದೇಶದ ಕಚ್ಚಾ ಸಾಮಗ್ರಿಗಳನ್ನು ಶೋಷಣೆ ಮಾಡಿಕೊಂಡು ಹೆಚ್ಚು ಶಕ್ತಿಯುತವಾದ ಮಾನವ ಶಕ್ತಿಯನ್ನು ಅಲಕ್ಷಿಸಿದ ಯಾವುದೇ ಯೋಜನೆಯು ಮಾನವ ಸಮಾನತೆಯನ್ನಾಗಲಿ, ದೇಶಕ್ಕೆ ನಿಜವಾದ ಆನಂದ ಮತ್ತು ಅಭ್ಯುದಯವನ್ನಾಗಲಿ ತರುವದಿಲ್ಲವೆಂಬುದು ಸ್ಪಷ್ಟವಾಗಿಯೇ ಇದೆ... ...ಭಾರತಕ್ಕೆ ಸಂಬಂಧಿಸಿದಂತೆ ನಿಜವಾದ ಯೋಜನೆಯು ಅದರ ಸಂಪೂರ್ಣ ಮಾನವ ಶಕ್ತಿಯನ್ನು ಯೋಗ್ಯ ಉಪಯೋಗಕ್ಕೆ ಮತ್ತು ಕಚ್ಚಾ ಸಾಮಗ್ರಿಗಳನ್ನು ವಸ್ತುಗಳಲ್ಲಿ ಉತ್ಪಾದನೆಯಾಗು ವಂತೆ ಅದರ ಅಸಂಖ್ಯಾತ ಹಳ್ಳಿಗಳಿಗೆ ವಿತರಣೆ ಮಾಡಬೇಕೆ ವಿನಃ ಹಳ್ಳಿಗಳಿಂದ ಹೊರಗೆ ಕಳಿಸುವದು ಅಥವಾ ಸಿದ್ಧವಸ್ತು ಗಳನ್ನು ಹೆಚ್ಚಿನ ಬೆಲೆಗೆ ಕೊಳ್ಳುವಂತೆ ದೇಶದಿಂದ ರಫ್ತು ಮಾಡುವದು ಇರಬಾರದು' ಅರ್ಥಾತ್ ಭಾರತಕ್ಕೆ ಸಂಬಂಧಿ ಸಿದಂತೆ ನಿಜವಾದ ಆರ್ಥಿಕ ಯೋಜನೆ ಮಾನವ ಶಕ್ತಿಯ ಯೋಗ್ಯ ಉಪಯೋಗದಿಂದ ಕೂಡಿರಬೇಕು ಇದಕ್ಕೊಂದು ಯೋಜನೆ ಗ್ರಾಮ ಮಟ್ಟದಲ್ಲಿ ಇರುವದು ಉಚಿತವಾಗಿದೆ.

ಈ ಹಿಂದೆ ಉಲ್ಲೇಖಿಸಿದ ಸಮಿತಿ ಕೇವಲ ಗುಡಿ ಮತ್ತು ಕಿರು ಉದ್ದಿಮೆಗಳ ಅಭಿವೃದ್ಧಿಯನ್ನಷ್ಟೇ ಲಕ್ಷ್ಯವಹಿ ಸದೇ ಆ ಗ್ರಾಮದ ಸರ್ವತೋಮುಖ ಅಭಿವೃದ್ಧಿಗೆ ಸಹಾಯ ಮಾಡಬೇಕು.

ವಿನೋಬಾಜಿಯವರ ಮಾತಿನಲ್ಲಿ 'ಹೊಸ ಯುಗ ನಮ್ಮ ಸಾಮಾಜಿಕ ರಚನೆಯನ್ನು ನಾವು ಬದಲು ಮಾಡಿಕೊಳ್ಳು ವದನ್ನು ಅಗತ್ಯಮಾಡಿದೆ. ಹಿಂದೆ ಉತ್ಪನ್ನದ ಬೆಳವಣಿಗೆ ಅಷ್ಟೊಂದು ದೊಡ್ಡ ಪ್ರಮಾಣದಲ್ಲಿ ಮುಂದುವರಿಯದಿರು ವಾಗ ಸಾಂಪ್ರದಾಯಿಕ ಕುಟುಂಬದ ಘಟಕಗಳ ಮೇಲೆ ನಿಂತ ಸಂಸ್ಥೆಗಳಿಂದ ಆರ್ಥಿಕ ವ್ಯಾಪಾರವನ್ನು ನಿರ್ವಹಿಸಲು ಸಾಧ್ಯವಿತ್ತು. ಆದರೆ ಈಗ ಯಾವುದೇ ಚಿಕ್ಕ ವಿಭಾಗವು ಹೊರ ಜಗತ್ತಿನಿಂದ ನಿರ್ಲಿಪ್ತವಾಗಿರಲು ಸಾಧ್ಯವಿಲ್ಲ. ಮತ್ತು ಒಂದು ಒಂಟಿ ಕುಟುಂಬವು ಗ್ರಾಮೀಣ ಸಮಾಜದಿಂದ ಬೇರೆ ಯಾಗಿ ಜೀವಿಸಲು ಸಾಧ್ಯವಿಲ್ಲ. ಬರುವ ಯುಗವು ಗ್ರಾಮೀಣ ಕುಟುಂಬಗಳದಾಗಿದೆ (ಗ್ರಾಮ ಪರಿವಾರಗಳು).'

ಹೀಗಿರುವಾಗ ಗ್ರಾಮೀಣ ಕೈಗಾರಿಕೆಗಳನ್ನು ಈ ಗ್ರಾಮ ಪರಿವಾರಗಳಿಂದ ಅಭಿವೃದ್ಧಿಪಡಿಸಲು ಸಾಧ್ಯವಿದೆ. ಕೆಲವು ಗ್ರಾಮಗಳ ಸಮುದಾಯವು ಈ ಗ್ರಾಮ ಪರಿವಾರವಾಗಬೇಕು. ಸಮಸ್ಯೆಗಳ ಪರಿಹಾರಕ್ಕೆ ಕುಟುಂಬಗಳಿಗೆ ಕೊಡುವ ಲಕ್ಷ್ಯ ಕ್ಕಿಂತ ಗ್ರಾಮ ಪರಿವಾರವನ್ನೇ ದೃಷ್ಟಿಯುತ ಪ್ರಧಾನವಾಗಿ ಇಟ್ಟುಕೊಳ್ಳಬೇಕು. ಈ ಗ್ರಾಮ ಪರಿವಾರಗಳ ಯೋಜನೆ ಯನ್ನು ರಾಷ್ಟ್ರೀಯ ಯೋಜನೆಯ ಒಂದು ಅಂಗವಾಗು ವಂತೆ ನೋಡಿಕೊಳ್ಳಬೇಕು. ಜನರಲ್ಲಿ ಯೋಜನಾ ವಿಷಯದಲ್ಲಿ ಇರುವ ನಿರ್ಲಿಪ್ತ ಭಾವನೆ ಹೊಡೆದೋಡಿಸುವಲ್ಲಿ ಈ ಗ್ರಾಮ ಪರಿವಾರಗಳು ಮಹತ್ವದ ಸ್ಥಾನ ಪಡೆಯಬೇಕು.

ಗ್ರಾಮಯೋಜನೆಯಲ್ಲಿ ಈ ಕೆಳಗಿನ ಅಂಶಗಳು ಹೆಚ್ಚಿನ ಪ್ರಾಧಾನ್ಯತೆಯನ್ನು ಪಡೆಯಬೇಕು.

೧. **ಮಾನವ ಶಕ್ತಿಯ ಯೋಗ್ಯ ಉಪಯೋಗ :** ಹಳ್ಳಿಯ ಜನರ ಮುಖ್ಯ ಉದ್ಯೋಗ ಒಕ್ಕಲುತನ. ಒಕ್ಕಲುತನ ಕೇವಲ ಋತುಮಾನದ ಉದ್ಯಮವಾಗಿದೆ. ಈ ಉದ್ಯೋಗದಲ್ಲಿ ತೊಡಗಿದ ಜನರು ಕೇವಲ ಕೆಲವೇ ತಿಂಗಳಲ್ಲಿ ಕೆಲಸದಲ್ಲಿ ಇದ್ದು ಮಿಕ್ಕ ದಿನಗಳಲ್ಲಿ ಉದ್ಯೋಗ ವಿಲ್ಲದೇ ಇರುವರು. ಇದರಿಂದ ಹಳ್ಳಿಗರ ತಲಾ ವರಮಾನ ಕಡಿಮೆ. ಅವರ ಉತ್ಪಾದನೆ ಕೂಡ ಕಡಿಮೆ ಇದೆ. ಇಂಥ ವೇಳೆಯಲ್ಲಿ 'ಗ್ರಾಮೀಣ ಸುಧಾರಣಾ ಮತ್ತು ಯೋಜನಾ ವೇದಿಕೆ' ಪೂರ್ಣವೇಳೆಯ ಉದ್ಯೋಗ ಕೊಡುವ ಯಾವ ಉದ್ದಿಮೆಗಳಿರಬೇಕು? ಭಾಗಶಃ ವೇಳೆಯ ಉದ್ಯೋಗ ನೀಡುವ ಯಾವ ಉದ್ದಿಮೆಗಳನ್ನು ಪ್ರೋತ್ಸಾಹಿಸಬೇಕೆಂದು ಸರಿಯಾಗಿ ವಿಚಾರಿಸಬೇಕು. ಅದೇ ವೇಳೆಯಲ್ಲಿ ಅದೊಂದು 'ಕಾಮಗಾರಿ ಕೇಂದ್ರ'ವನ್ನು ಸ್ಥಾಪಿಸಿ ಅದರ ಮೂಲಕ,

೧. ಗ್ರಾಮೀಣ ಕೆಲಸಗಾರರಿಗೆ ಕೈಗಾರಿಕೆಗಳ ವಿಷಯವಾಗಿ ಯೋಗ್ಯ ಮಾರ್ಗದರ್ಶನ ಮಾಡುವದು.

೨. ತುಟ್ಟಿ ಸಾಧನ ಸಲಕರಣೆಗಳನ್ನು ಕೊಂಡು ಕೊಂಡು ಅವುಗಳನ್ನು ಗ್ರಾಮೀಣ ಕೈಗಾರಿಕೆಯಲ್ಲಿ ತೊಡಗಿಸಿದವರಿಗೆ ಸಾರ್ವತ್ರಿಕ ಉಪಯೋಗಕ್ಕಾಗಿ ಇಡುವದು.

೩. ಇತರ ಸೇವಾ ಸೌಲಭ್ಯಗಳನ್ನು ನೀಡುವದು.

೪. ಎಲ್ಲಿ ಎಲ್ಲಿ ಸಾಧ್ಯವಿದೆಯೋ ಅಲ್ಲಿ ಕುಟುಂಬದ ಮೇಲೆ ನಿಂತಿರುವ ಚಟುವಟಿಕೆಗಳನ್ನು ಗ್ರಾಮೀಣ ಮಟ್ಟದ ಚಟುವಟಿಕೆಗಳಾಗಿ ಪರಿವರ್ತಿಸುವದು. ಉದಾ- ಚಕ್ಕಡಿ ಗಾಡಿಗಳು, ಗ್ರಾಮೀಣ ಬೇಕರಿ, ಅಗಸನ ಕೆಲಸ, ಫಸಲನ್ನು ಒಟ್ಟಾಗಿ ಕಾಯುವದು ಇತ್ಯಾದಿ.

೫. ಅಲ್ಲದೆ ಈ ಸಂಸ್ಥೆಯೇ ಕೇಂದ್ರ ಗ್ರಾಮೀಣ ನೈರ್ಮಲ್ಯ ಕಾಯ್ದುಕೊಳ್ಳುವದು ಇತ್ಯಾದಿಗಳಿಗೆ ಸಹಲಕ್ಷ್ಯ ವಹಿಸಬೇಕು.

೨. **ಶ್ರಮ ಬ್ಯಾಂಕು :** ನಾವು ದಿನ ನಿತ್ಯ ರಕ್ತ ಬ್ಯಾಂಕು, ಪುಸ್ತಕ ಬ್ಯಾಂಕುಗಳನ್ನು ಕೇಳುತ್ತಿರುತ್ತೇವೆ. ಅದೇ ಮಾದರಿಯ ಬ್ಯಾಂಕು ಶ್ರಮಕ್ಕೆ ಆವಶ್ಯ. ಗ್ರಾಮೀಣ ಪ್ರದೇಶದ ಶಕ್ತಿ ಅಂದರೆ ಮಾನವ ಶಕ್ತಿ. ಈ ಶಕ್ತಿಯು ಯೋಗ್ಯ ಉಪಯೋಗವಿಲ್ಲದೆ ಯಾವುದೇ ಕ್ರಮ ಗ್ರಾಮೀಣ ಪ್ರದೇಶಗಳ ಅಭಿವೃದ್ಧಿಯನ್ನು ಸಾಧಿಸದು. ಅಭಿವೃದ್ಧಿ ಯಲ್ಲಿ ಮಾನವ ಶಕ್ತಿಯ ಯೋಗ್ಯ ಉಪಯೋಗದ ಸಲುವಾಗಿ ಅಲ್ಲಿಯ ಸ್ಥಳೀಯ ಸಂಪನ್ಮೂಲಗಳ ಮೇಲೆ ಸಂಪೂರ್ಣವಾಗಿ ಅಧಿಕಾರ ಇರುವ ಒಂದು ಸಂಸ್ಥೆ ಇರಬೇಕು. ಇಂತಹ ವೇಳೆಯಲ್ಲಿ ಸಮಿತಿ ಈ ಉಪಯೋಗದ ಸಲುವಾಗಿ ಒಂದು ವಿಭಾಗ ತೆರೆಯಬೇಕು. ಈ ಬ್ಯಾಂಕು ಗ್ರಾಮಗಳಲ್ಲಿ ಕೆಲಸದ ಸೌಲಭ್ಯವಿಲ್ಲದೆ ನಿರುದ್ಯೋಗ ಇರುವ ಪ್ರಮಾಣ ಕಂಡು

ಹಿಡಿಯಬೇಕು. ಒಂದು ಕೊಟ್ಟ ಕಾಲಾವಧಿಯಲ್ಲಿ (ಹೆಚ್ಚಾಗಿ ಒಂದು ವರ್ಷ) ಕುಟುಂಬ ಮತ್ತು ಗ್ರಾಮೀಣ ಪ್ರೊಜೆಕ್ಟಗಳು ಎಷ್ಟು ನಡೆಸಿಕೊಂಡು ಹೋಗಬಹುದು. ಮತ್ತು ಅವುಗಳಲ್ಲಿ ಸಿಗುವ ನೌಕರಿಯು ಪ್ರಮಾಣವೆಷ್ಟೆಂಬುದನ್ನು ತಿಳಿದುಕೊಳ್ಳಬೇಕು. ಖಾಲಿ ಇರುವ ವೇಳೆಗೆ ಅನುಸಾರವಾಗಿ ಈ ಪ್ರೊಜೆಕ್ಟಗಳಲ್ಲಿ ಕೆಲಸದ ಸೌಲಭ್ಯ ಸಮತೂಗಿಸಬೇಕು. ಕೂಲಿಯ ಕೆಲ ಅಂಶವನ್ನಾದರೂ ಭಾಗಶಃವಾಗಿ ಮುಂಗಡ ಕೊಡುವ ಮತ್ತು ಭಾಗಶಃ ಮುಂದೆ ಕೊಡುವ ವ್ಯವಸ್ಥೆ ಮಾಡಿದರೆ ಒಳಿತು. ವೈಯಕ್ತಿಕ ಕುಟುಂಬಗಳ ಖಾತೆಯನ್ನು ತೆಗೆದುಕೊಂಡು ಶ್ರಮ ಬ್ಯಾಂಕು ಶ್ರಮದ ಠೇವಣಿ ಮತ್ತು ಸಾಲದ ಸೌಲಭ್ಯ ಒದಗಿಸಬಹುದು. ಹೀಗೆ ಬ್ಯಾಂಕು ಶ್ರಮ ವಿನಿಮಯದ ಪಾರುವತ್ಯಾಗಾರನಾಗಿ ಕೆಲಸಮಾಡುತ್ತದೆ. ಅದೇ ರೀತಿ ಅದು ಗ್ರಾಮದ ಶ್ರಮಶಕ್ತಿಯ ಬಜೆಟ್ ನಿರ್ಮಿತಿಯಲ್ಲಿ ನೇತೃತ್ವವಹಿಸುತ್ತದೆ.

೩. **ಸಮಿತಿಯ ನಿಧಿ :** 'ಗ್ರಾಮೀಣ ಸುಧಾರಣೆ ಮತ್ತು ಯೋಜನಾ ವೇದಿಕೆ' ತನಗೆ ಬೇಕಾದ ನಿಧಿಯನ್ನು ಈ ಕೆಳಗಿನ ಬಾಬುಗಳಿಂದ ಗಳಿಸಬಹುದು :

೧. ಮೆಂಬರುಗಳ ಫೀ.

೨. ವಾರ್ಷಿಕ ವರ್ಗಣಿ-ನಗದು, ಶ್ರಮ ಅಥವಾ ವಸ್ತು ರೂಪದಲ್ಲಿ.

೨. ಸಾರ್ವಜನಿಕರಿಂದ ಮತ್ತು ಖಾಸಗಿ ಸಂಸ್ಥೆ ಮತ್ತು ವ್ಯಕ್ತಿಗಳಿಂದ ವರ್ಗಣಿ ಸ್ವೀಕರಿಸುವದು.

೪. ಹಣಕಾಸಿನ ಸಂಸ್ಥೆಗಳು, ಸ್ಥಾನಿಕ ರಾಜ್ಯ ಮತ್ತು ಕೇಂದ್ರ ಸರಕಾರ ಹಾಗೂ ಖಾಸಗಿಯುವರಿಂದ ಸಾಲ ಪಡೆಯುವದು.

೫. ಸಮಿತಿಯ ಅಧಿಕಾರದಲ್ಲಿ ಇರುವ ಸಂಪತ್ತು ಹಾಗೂ ವ್ಯವಹಾರದಿಂದ ದೊರೆತ ಲಾಭ.

೬. ಕೇಂದ್ರ, ರಾಜ್ಯ ಹಾಗೂ ಸ್ಥಾನಿಕ ಸಂಸ್ಥೆಗಳ ಸಹಾಯ ಧನ.

ಒಟ್ಟಿನಲ್ಲಿ ಹೇಳುವದಾದರೆ, ಭಾರತದ ಆರ್ಥಿಕ ಅಭಿವೃದ್ಧಿಯಲ್ಲಿ ಈ ಉದ್ದಿಮೆಗಳಿಗೊಂದು ಮಹತ್ವದ ಸ್ಥಾನವಿದೆ. ಹಳ್ಳಿಗಳ ನಾಡಾದ ಭಾರತವು ಸುಖ ಸಂತೋಷದ ನೆಲೆವೀಡಾಗಬೇಕಾದರೆ ಇವುಗಳ ಅಭಿವೃದ್ಧಿ ಸಮಗ್ರ ಆರ್ಥಿಕ ನೀತಿಯಲ್ಲಿ ಒಂದು ಅಂಗವಾಗಿ ರೂಪಿತವಾಗಬೇಕು.

———

ಉಪನ್ಯಾಸ ಗ್ರಂಥಮಾಲೆಯ
ಇತ್ತೀಚಿನ ಪ್ರಕಟನೆಗಳು

ಬೆಲೆ : ಪ್ರತಿ ಒಂದಕ್ಕೆ ೨೫ ಪೈಸೆ

೧ ಪಂಚತಂತ್ರದ ಕಥೆಗಳು
—ವರದರಾಜ ಹುಯಿಲಗೋಳ

೨ ಪಂಪಕವಿ ಚಿತ್ರಿಸಿದ ಭೀಷ್ಮರು —ಬಿ. ಸಿ. ಜವಳಿ

೩ ಮದುವೆ ಮತ್ತು ಮಹಿಳೆ —ನೀಲಮ್ಮ ಕತ್ನಳ್ಳಿ

೪ ವೀರ ಶೈವಾಮೃತ ಮಹಾಪುರಾಣ
—ಕಾಶೀಪುಟ್ಟಸೋಮಾರಾಧ್ಯ

೫ ದನಗಳ ರೋಗಗಳು ಹಾಗೂ ಅವುಗಳ
ನಿವಾರಣೋಪಾಯಗಳು —ರಾಮರಾವ್ ಜ್ಯೋತಿ

೬ ಕವಯಿತ್ರಿ ಮಹಾದೇವಿ ವರ್ಮಾ
—ಎಸ್. ಜಿ. ಇಟಗಿ

೭ ಗ್ರಾಮಾಂತರ ಪ್ರದೇಶಗಳಲ್ಲಿ ರಾಷ್ಟ್ರೀಕೃತ
ಬ್ಯಾಂಕುಗಳ ಪಾತ್ರ ಎ. ಎಂ. ಯರನಾಳ

೮ ಕನಡದಲ್ಲಿ ಪ್ರವಾಸ ಸಾಹಿತ್ಯ
—ಜಿ. ಎಸ್. ವಡಗಾಂವಿ

೯ ಪ್ಲೇಟೋನ ಆದರ್ಶ ರಾಜ್ಯದ ರಾಜಕೀಯ
ಸಿದ್ಧಾಂತಗಳು —ಕೆ. ಎಂ. ಮೋಹರವಾಡೆ

೧೦ ಜನಪದ ಸಾಹಿತ್ಯದಲ್ಲಿ ಕಿರಿದರೊಳೆ
ಪಿರಿದರ್ಥದ ಚಲಕ —ಸಿಂಪಿ ಲಿಂಗಣ್ಣ

ಪ್ರಸಾರಂಗ ವಿಸ್ತರಣ–ಪ್ರಕಟನ ವಿಭಾಗ
ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ–೫೮೦ ೦೦೩